ಸಂಪಾದಕರು: ರವಿಕುಮಾರ್ ಸಿ.ಹೆಚ್.
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYAPRAGATHI Kannada Daily
ಪ್ರತಿ ಸುದ್ಧಿಯ ಧ್ವನಿ
suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 Issue: 34
ಸಂಪುಟ: 05 ಸಂಚಿಕೆ: 34
Date: 11-02-2026 Wednesday
RNI NO : KARKAN/2021/80805 L2/RNP-1285/TMR/2025-27
Page :4 ಪುಟ : 4
Price: 1.00 ಬೆಲೆ: 1.00 ರೂ

## ಮೋದಿ ಸಂಸತ್ ನಿರ್ಲಕ್ಷಿಸಿದ್ದಾರೆ ಸಿದ್ದು ಟ್ವೀಟ್: ಕಾಂಗ್ರೆಸ್‌ನಲ್ಲಿನ ಆಂತರಿಕ ಬಿಕ್ಕಟ್ಟು :ಬಿಜೆಪಿ

ಪ್ರಧಾನಿ ಮೋದಿ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರ ಎಕ್ಸ್ ಪೋಸ್ಟ್ ರಾಜಕೀಯ ವಾಗ್ಯುದ್ಧಕ್ಕೆ ಕಾರಣವಾಗಿದೆ. ಮೋದಿ ಸಂಸತ್ ನಿರ್ಲಕ್ಷಿಸಿದ್ದಾರೆಂಬ ಆರೋಪಕ್ಕೆ ಬಿಜೆಪಿ ತಿರುಗೇಟು ನೀಡಿದೆ. ಸಿಎಂ ಕುರ್ಚಿಗಾಗಿ ಕಿತ್ತಾಡುತ್ತಿರುವ ಕಾಂಗ್ರೆಸ್ ನಾಯಕರು ಮೊದಲು ರಾಹುಲ್ ಗಾಂಧಿಯನ್ನು ಹುಡುಕಿಕೊಳ್ಳಲಿ ಎಂದು ಬಿಜೆಪಿ ತಿವಿದಿದೆ. ರಾಹುಲ್ ಗಾಂಧಿ ಅಲಭ್ಯತೆ ಮತ್ತು ಕಾಂಗ್ರೆಸ್‌ನಲ್ಲಿನ ಆಂತರಿಕ ಬಿಕ್ಕಟ್ಟು ಪ್ರಸ್ತಾಪಿಸಿ ಬಿಜೆಪಿ ಸಿಎಂಗೆ ಟಾಂಗ್ ನೀಡಿದೆ.

ಪ್ರಧಾನಿ ಮೋದಿ ಬಗ್ಗೆ ಸಿದ್ದರಾಮಯ್ಯ ಪೋಸ್ಟ್: ರಾಹುಲ್ ಹೆಸರು ಉಲ್ಲೇಖಿಸಿ ಬಿಜೆಪಿ ಗುದ್ದು

ಪ್ರಧಾನಿ ಮೋದಿ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರ ಎಕ್ಸ್ ಪೋಸ್ಟ್ ರಾಜಕೀಯ ವಾಗ್ಯುದ್ಧಕ್ಕೆ ಕಾರಣವಾಗಿದೆ. ಮೋದಿ ಸಂಸತ್ ನಿರ್ಲಕ್ಷಿಸಿದ್ದಾರೆಂಬ ಆರೋಪಕ್ಕೆ ಬಿಜೆಪಿ ತಿರುಗೇಟು ನೀಡಿದೆ. ಸಿಎಂ ಕುರ್ಚಿಗಾಗಿ ಕಿತ್ತಾಡುತ್ತಿರುವ ಕಾಂಗ್ರೆಸ್ ನಾಯಕರು ಮೊದಲು ರಾಹುಲ್ ಗಾಂಧಿಯನ್ನು ಹುಡುಕಿಕೊಳ್ಳಲಿ ಎಂದು ಬಿಜೆಪಿ ತಿವಿದಿದೆ. ರಾಹುಲ್ ಗಾಂಧಿ ಅಲಭ್ಯತೆ ಮತ್ತು ಕಾಂಗ್ರೆಸ್‌ನಲ್ಲಿನ ಆಂತರಿಕ ಬಿಕ್ಕಟ್ಟು ಪ್ರಸ್ತಾಪಿಸಿ ಬಿಜೆಪಿ ಸಿಎಂಗೆ ಟಾಂಗ್ ನೀಡಿದೆ.

ಲೋಕಸಭೆಯಲ್ಲಿ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ನೀಡದೆ ತಪ್ಪಿಸಿಕೊಂಡಿರುವುದು



ಸಂಸತ್‌ಗೆ ತೋರಿಸಿರುವ ಅಗೌರವ ಮಾತ್ರವಲ್ಲ, ಸತ್ಯವನ್ನು ಎದುರಿಸಲಾಗದ ಹೇಡಿತನವೂ ಆಗಿದೆ. ಭಾರತದ ಸಂಸತ್ತಿನ ಇತಿಹಾಸದಲ್ಲಿ ಮೊದಲ ಬಾರಿಗೆ ಪ್ರಧಾನ ಮಂತ್ರಿಯವರ ಉತ್ತರ ಇಲ್ಲದೆ ವಂದನಾ ನಿರ್ಣಯವನ್ನು ಅಂಗೀಕರಿಸಲಾಗಿದೆ. ಓರ್ವ ಪ್ರಧಾನಿ ಸಂಸತ್ತನ್ನು ನಿರ್ಲಕ್ಷಿಸುವುದೆಂದರೆ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ನಡೆ ಎಂದರ್ಥ ಎಂದು ಸಿದ್ದರಾಮಯ್ಯ ಆರೋಪಿಸಿದ್ದಾರೆ.

### ಸಿಎಂಗೆ ವಿಜಯೇಂದ್ರ ಕೌಂಟರ್

ಪ್ರಧಾನಿ ಮೋದಿ ಕುರಿತು ಸಿಎಂ ಸಿದ್ದರಾಮಯ್ಯ ಆರೋಪಕ್ಕೆ ಬೆಂಗಳೂರಿನಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿರುಗೇಟು ನೀಡಿದ್ದಾರೆ. ಸಿದ್ದರಾಮಯ್ಯನವರೇ ಪ್ರಧಾನಿ ಎಲ್ಲೂ ತಪ್ಪಿಸಿಕೊಂಡು ಹೋಗಿರಲಿಲ್ಲ. ಪ್ರಧಾನಿ ನರೇಂದ್ರ ಮೋದಿಯವರು ಸಂಸತ್ ಭ ವನದಲ್ಲೇ ಇದ್ದರು. ರಾಜ್ಯಸಭೆಯಲ್ಲಿ ನಿಮ್ಮ ಪಕ್ಷ ಹಾಗೂ ವಿರೋಧ ಪಕ್ಷಗಳ ನಡವಳಿಕೆ, ಧೋರಣೆಗಳನ್ನು ಬಯಲಿಗೆಳೆದು ದಿಟ್ಟತನದಿಂದ ಮಾತನಾಡಿದರು. ವಾಸ್ತವವಾಗಿ ತಪ್ಪಿಸಿಕೊಳ್ಳುವ ಸಂಸ್ಕೃತಿ ಇದ್ದರೆ ಅದು ನಿಮ್ಮ ಕಾಂಗ್ರೆಸ್‌ನ ನೆಲೆಯಿಂದ ಉದ್ಭವಿಸಿದ್ದು. ಇದಕ್ಕೆ ಸಾಕ್ಷಿಯಾಗಿ ರಾಹುಲ್ ಗಾಂಧಿಯೇ ನಮ್ಮ ಕಣ್ಣಮುಂದೆ ಇದ್ದಾರೆ ಎಂದು ಕೌಂಟರ್ ಕೊಟ್ಟಿದ್ದಾರೆ.

ಕರ್ನಾಟಕದಲ್ಲಿ ನಿಮ್ಮ ಆಡಳಿತದ ಪ್ರತಿಫಲವೆಂಬಂತೆ ಅರಾಜಕತೆ ಸೃಷ್ಟಿಯಾಗಿದ್ದು, ಸಿಎಂ ಪದವಿಯ ಸುತ್ತ ಕಳೆದ 1 ವರ್ಷದಿಂದಲೂ ಕಿತ್ತಾಟ ನಡೆಯುತ್ತಿದೆ. ಸಮಸ್ಯೆ ಬಗೆಹರಿಸಬೇಕಾದ ನಿಮ್ಮ ಹೈಕಮಾಂಡ್ ರೂವಾರಿ ರಾಹುಲ್ ಗಾಂಧಿಯವರು ಕೈಗೆ ಸಿಗದೇ ತಪ್ಪಿಸಿಕೊಂಡಿದ್ದಾರೆ. ಅವರನ್ನು ಹುಡುಕಿಕೊಂಡು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದಿನ ಬಿಟ್ಟು ದಿನ ದೆಹಲಿಗೆ ಅಲೆಯುತ್ತಿದ್ದಾರೆ. ಮೊದಲು ನೀವು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿ ರಾಹುಲ್ ಗಾಂಧಿಯವರು ಎಲ್ಲಿದ್ದಾರೋ ಹುಡುಕಿ ಮುಖ್ಯಮಂತ್ರಿ ಸ್ಥಾನದ ಕಗ್ಗಂಟನ್ನು ಬಿಡಿಸಿಕೊಳ್ಳಿ. ಕರ್ನಾಟಕ ಜನತೆಯ ಶಾಪದಿಂದ ಮುಕ್ತರಾಗಿ ಎಂದು ಟೀಕಿಸಿದ್ದಾರೆ.

## ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಚಿಕ್ಕನಾಯಕನಹಳ್ಳಿ ಪ್ರಥಮ ಸ್ಥಾನ

ಶಿಕ್ಷಣಕ್ಕೆ ಮಾತ್ರವಲ್ಲದೇ ಸಾಂಸ್ಕೃತಿಕವಾಗಿಯು ನಮ್ಮ ಸಂಪೂರ್ಣ ಸಹಕಾರ ಇದ್ದು ಎಲ್ಲಾ ಕ್ಷೇತ್ರದಲ್ಲೂ ಸಾಧನೆ ಮಾಡಬೇಕು – ಶಾಸಕ ಸಿ.ಬಿ.ಸುರೇಶ್‌ಬಾಬು



ಚಿಕ್ಕನಾಯಕನಹಳ್ಳಿ:–ನಮ್ಮ ಕಲೆ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕಾಗಿದ್ದು ನಮ್ಮ ಜವಾಬ್ದಾರಿ ಈ ನಿಟ್ಟಿನಲ್ಲಿ ನಮ್ಮ ಕ್ಷೇತ್ರದ ವಿದ್ಯಾರ್ಥಿಗಳು ನಮ್ಮ ಭಾಗದ ವೀರಗಾಸೆ ಕುಣಿತವನ್ನು ಉತ್ತಮ ರೀತಿಯಲ್ಲಿ ಪ್ರದರ್ಶನ ನೀಡಿ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನಗಳಿಸಿರುವುದು ನಮಗೆ ಹೆಮ್ಮೆಯಾಗಿದೆ ಎಂದು ಶಾಸಕ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.ಪಟ್ಟಣದ ತೀನಂಶ್ರೀ ಭವನದಲ್ಲಿ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನಗಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಿದ ಮಾತನಾಡಿದ ಅವರು ನಮ್ಮ ಕಲ್ಪತರು ನಾಡಿನ ನೃತ್ಯವನ್ನು ರಾಜ್ಯ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಚಿಕ್ಕವ ಯಸ್ಸಿನಲ್ಲೇ ನಮ್ಮ ಕಲೆಯನ್ನು ಉಳಿಸುವಂತಹ ಪ್ರತಿಭೆಯನ್ನು ತೋರಿಸುವ ಮೂಲಕ ಪ್ರಥಮ ಸ್ಥಾನಗಳಿಸಿರುವುದು ಹೆಮ್ಮೆಯಾಗಿದ್ದು ನಮಗೆ ಸರ್ಕಾರಿ, ಅನುದಾನಿತ, ಅನುದಾನ ರಹಿತ ಎಂಬ ಬೇದಬಾವ ಇಲ್ಲ ಎಲ್ಲಾ ಶಾಲೆಯ ವಿದ್ಯಾರ್ಥಿಗಳು ನಮ್ಮ ಮಕ್ಕಳೇ ಎಂದು ತಿಳಿದಿದ್ದು ಯಾವುದೇ ಮಕ್ಕಳು ಸಾಧನೆ ಮಾಡಿದರು ನಾವು ಆ ಮಕ್ಕಳನ್ನು ಅಭಿನಂದಿಸುವುದು ನಮ್ಮ ಜವಾಬ್ದಾರಿಯಾಗಿದೆ ಅದರಂತೆ ನೆನ್ನೆ ಗೆದ್ದಂತಹ ಮಕ್ಕಳಿಗೆ ಇಂದೇ ಅಭಿನಂದಿಸುತ್ತಿದ್ದೇವೆ ಇದೇ ರೀತಿ ಮಕ್ಕಳು ಇನ್ನು ಹೆಚ್ಚು ಸಾಧನೆ ಮಾಡಬೇಕು ಎಂದರು.

ಬಿಇಒ ಕಾಂತರಾಜು ಮಾತನಾಡಿ ಕೊಪ್ಪಳ ಜಿಲ್ಲೆಯ ಕಾರಟಗಿಯಲ್ಲಿ ನಡೆದ ರಾಜ್ಯಮಟ್ಟದ ಪ್ರತಿಭಾ ಕಾರಂಜಿ ಕಲೋತ್ಸವ ಸ್ಪರ್ಧೆಯಲ್ಲಿ ತಾಲ್ಲೂಕಿನ ವಿದ್ಯಾವಾರಿಧಿ ಇಂಟರ್ ನ್ಯಾಷನಲ್ ಶಾಲೆಯ ನಮ್ಮ ಗ್ರಾಮೀಣ ಭಾಗದ ಮಕ್ಕಳು ವೀರಗಾಸೆಯ ನಮ್ಮ ಕಲೆಯನ್ನು ಪ್ರದರ್ಶನ ಮಾಡುವ ಮೂಲಕ ನಮ್ಮ ನಾಡಿನ ಸಂಸ್ಕೃತಿಯನ್ನು ಉಳಿಸುವ ಕೆಲಸ ಮಾಡಿದ್ದಾರೆ ಶಾಲೆಯ ವಿದ್ಯಾರ್ಥಿಗಳಾದ ಯಶಿಕಾ,ಹೇಮಾ,ಮಾನ್ಯಾ ತಾ, ಸಿಂಚನ,ಲೇಪನ್,ವಂಶಿರಾಜ್, ಜೀವನ್, ಲಿಖಿತ್, ವಿಷ್ಣುವರ್ಧನ್,ಮಹಾನ್,ಬಾಲಾಜಿ, ಲಕ್ಷೀ, ಪ್ರಸಾದ್ ಈ ವಿದ್ಯಾರ್ಥಿಗಳನ್ನು ಅಭಿನಂದಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ತಹಸೀಲ್ದಾರ್ ಮಮತಾ ಎಂ, ಸಿಡಿಪಿಒ ಹೊನ್ನಪ್ಪ , ಸೇರಿದಂತೆ ಇತರರು ಇದ್ದರು.

## ದೇಶದ ಸಮಗ್ರ ಅಭಿವೃದ್ಧಿಗೆ ಪೂರಕ ಕೇಂದ್ರ ಬಜೆಟ್ ವಿಕಸಿತ ಭಾರತದತ್ತ ಕೇಂದ್ರ ಸರ್ಕಾರ

ತುಮಕೂರು: ಕೇಂದ್ರ ಅರ್ಥ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್ ದೇಶದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡುವ, ವಿತ್ತೀಯ ಶಿಸ್ತಿನ ಬಜೆಟ್, ಪ್ರಧಾನಿ ಮೋದಿಯವರ ವಿಕಸಿತ ಭಾರತ 2047 ಕನಸನ್ನು ಸಾಕಾರಗೊಳಿಸಲು ಸಹಕಾರಿಯಾಗಿರುವ ಬಜೆಟ್ ಎಂದು ವಿಧಾನ ಪರಿಷತ್ ಸದಸ್ಯ ಕೇಶವಪ್ರಸಾದ್ ಅಭಿಪ್ರಾಯಪಟ್ಟರು.




ನಗರದ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಕೇಂದ್ರ ಬಜೆಟ್ ವಿಶ್ಲೇಶಿಸಿ ಮಾತನಾಡಿದ ಅವರು, ದೇಶದ ಬದಲಾವಣೆ, ಅಂತರಾಷ್ಟ್ರೀಯ ವಿದ್ಯಮಾನಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ಮುಂದಿನ ಪೀಳಿಗೆಯ ಭವಿಷ್ಯದ ಬೆಳವಣಿಗೆಗೆ ಪೂರಕವಾಗಿರುವ ದೂರದೃಷ್ಟಿಯ ಬಜೆಟ್ ಇದಾಗಿದೆ. ದೇಶದ ಪ್ರತಿಯೊಬ್ಬ ವ್ಯಕ್ತಿಯ ವಿಕಸನವನ್ನು ಗಮನದಲ್ಲಿಟ್ಟುಕೊಂಡು ರೂಪಿಸಿರುವ ಸಮತೋಲನಾ ಬಜೆಟ್ ಎಂದರು.

ಅಸ್ಥಿರ ಜಾಗತಿಕ ಪರಿಸ್ಥಿತಿಯಲ್ಲೂ ಮೋದಿ ಸರ್ಕಾರವು ಶೇಕಡ 7ರಷ್ಟು ಆರ್ಥಿಕ ಬೆಳವಣಿಗೆ ಸಾಧಿಸಿದೆ. ವಿತ್ತಿಯ ಕೊರತೆಯನ್ನು ಜಿಡಿಪಿ ಶೇಕಡ 4.3ಗೆ ಇಳಿಸಲಾಗಿದೆ. ಬಹು ಬೇಡಿಕೆಯ ಸೆಮಿ ಕಂಡಕ್ಟರ್ ಕ್ಷೇತ್ರಕ್ಕೆ ಭಾರತದ ದೊಡ್ಡ ಕೊಡುಗೆ ನೀಡಬೇಕು ಎನ್ನುವ ಕಾರಣಕ್ಕೆ ದೊಡ್ಡ ಪ್ರಮಾಣದ ಹೂಡಿಕೆಗೆ ಕೇಂದ್ರ ಸರ್ಕಾರ ಮುಂದಾಗಿದೆ. ಭಾರತವನ್ನು ಜಾಗತಿಕ ಬಯೋಫಾರ್ಮಾ ಹಬ್ ಮಾಡಲು ಮುಂದಿನ 5 ವರ್ಷಗಳಿಗಾಗಿ 10 ಸಾವಿರ ಕೋಟಿ ರೂ. ಮೀಸಲಿಡಲಾಗಿದೆ ಎಂದು ಹೇಳಿದರು.

ಗ್ರಾಮೀಣ ಭಾರತದ ಜೀವನಾಡಿಗಳ ಪುನಶ್ಚೇತನ ಕಾರ್ಯಕ್ರಮವಾಗಿ ಮಹಾತ್ಮಾ ಗಾಂಧಿ ಗ್ರಾಮ ಸ್ವರಾಜ್ ಯೋಜನೆ ಆರಂಭಿಸಿ ಖಾದಿ, ಕೈಮಗ್ಗ, ಕರಕುಶಲ ವಸ್ತುಗಳಿಗೆ ಜಾಗತಿಕ ಮಾರುಕಟ್ಟೆ ಸಂಪರ್ಕ ಕಲ್ಪಿಸಲು ಹೊಸ ಯೋಜನೆ ರೂಪಿಸಲಾಗುತ್ತಿದೆ. ತೆಂಗು, ಶ್ರೀಗಂಧ, ಗೋಡಂಬಿ ಮತ್ತು ಕೋಕೋ ಬೆಳೆಗಳಿಗೆ ವಿಶೇಷ ಬೆಂಬಲ ನೀಡಲಾಗಿದೆ. ಜನಸಾಮಾನ್ಯರ ಆರೋಗ್ಯ ರಕ್ಷಣೆ ಆಶಯದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆ ತರಲಾಗುತ್ತಿದೆ. ಜಿಲ್ಲಾ ಕೇಂದ್ರದ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಿ ಎಲ್ಲಾ ರೀತಿಯ ಚಿಕಿತ್ಸಾ ಸೌಲಭ್ಯ ದೊರೆಯುವಂತೆ ಮಾಡುವ ಕಾರ್ಯಕ್ರಮ ರೂಪಿಸಲಾಗುತ್ತಿದೆ ಎಂದು ಕೇಶವಪ್ರಸಾದ್ ಹೇಳಿದರು.

ಶಾಸಕ ಜಿ.ಬಿ.ಜ್ಯೋತಿಗಣೇಶ್, ಜಿಲ್ಲಾ ಬಿಜೆಪಿ ಹಿರಿಯ ಉಪಾಧ್ಯಕ್ಷರಾದ ವೈ.ಹೆಚ್.ಹುಚ್ಚಯ್ಯ, ಸಾಗರನಹಳ್ಳಿ ವಿಜಯಕುಮಾರ್, ಪ್ರಧಾನ ಕಾರ್ಯದರ್ಶಿ ಗಂಗರಾಜು, ಕಾರ್ಯದರ್ಶಿಗಳಾದ ಹೆಚ್.ಎಂ.ರವೀಶಯ್ಯ, ಜ್ಯೋತಿ ತಿಪ್ಪೇಸ್ವಾಮಿ, ಜಿಲ್ಲಾ ವಕ್ತಾರ ಟಿ.ಆರ್.ಸದಾಶಿವಯ್ಯ, ಒಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಕೆ.ವೇದಮೂರ್ತಿ, ಮಾಧ್ಯಮ ಪ್ರಮುಖ್ ಜೆ.ಜಗದೀಶ್, ಅಕ್ಷಯ್ಯ ಚೌಧರಿ, ಮರಿತಿಮ್ಮಯ್ಯ ಹಾಜರಿದ್ದರು.

## ಕೆಟ್ಟು ಹೋದ ಹಿಟಾಚಿ ಶೋ ರೂಂಗೆ

## ಬೀಗ ಜಡಿದು ಗಮನ ಸೆಳೆದ ಗ್ರಾಹಕ

ತುಮಕೂರು: ಹೊಸದಾಗಿ ಖರೀದಿಸಿದ ಹಿಟಾಚಿ ಖರೀದಿ ಮಾಡಿದ ಕೆಲವೇ ತಿಂಗಳಲ್ಲಿ ಯಂತ್ರದಲ್ಲಿ ತಾಂತ್ರಿಕ ದೋಷ ಉಂಟಾಗಿದೆ ಎಂದು ಆರೋಪಿಸಿ ಆಕ್ರೋಶಗೊಂಡು ಗ್ರಾಹಕನೊಬ್ಬ ಶೋರೂಂಗೆ ಬೀಗ ಹಾಕಿದ ಘಟನೆ ತುಮಕೂರು ಜಿಲ್ಲೆಯ ಅಂತರಸನಹಳ್ಳಿ ಬಳಿಯ ಟಾಟಾ ಹಿಟಾಚಿ ಶೋರೂಂನಲ್ಲಿ ನಡೆದಿದೆ. ಬೆಳಗ್ಗೆ ಶೋರೂಮ್‌ಗೆ ಬಂದ ಗ್ರಾಹಕ ಸಿಬ್ಬಂದಿಯನ್ನೆಲ್ಲ ಹೊರ ಕಳುಹಿಸಿ ಬೀಗ ಜಡಿದಿದ್ದಾನೆ.




ಗುಬ್ಬಿ ಮೂಲದ ಗಿರೀಶ್ ಎಂಬವರು ಐದು ತಿಂಗಳ ಹಿಂದೆ ಸುಮಾರು 52 ಲಕ್ಷ ರೂಪಾಯಿ ನೀಡಿ ಹೊಸ ಹಿಟಾಚಿ ಖರೀದಿಸಿದ್ದರು. 7 ಲಕ್ಷ ರೂಪಾಯಿ ಡೌನ್ ಪೇಮೆಂಟ್ ನೀಡಿ, ಪ್ರತಿ ತಿಂಗಳು 1.15 ಲಕ್ಷ ರೂ. ಇಎಂಐ ಕಟ್ಟುತ್ತಿದ್ದರು. ಆದರೆ ಯಂತ್ರ ಖರೀದಿಸಿದ ಮೂರೇ ತಿಂಗಳಲ್ಲಿ ದೋಷ ಕಾಣಿಸಿಕೊಂಡು ಕೆಲಸ ಮಾಡದೇ ನಿಂತಿದೆ ಎಂದು ಅವರು ಆರೋಪಿಸಿದ್ದಾರೆ.

ಯಂತ್ರದಲ್ಲಿ ಸಮಸ್ಯೆ ಉಂಟಾದ ಬಳಿಕ ಹಲವು ಬಾರಿ ಶೋರೂಂ ಹಾಗೂ ಕಂಪನಿಯನ್ನು ಸಂಪರ್ಕಿಸಿದರೂ ಸಮರ್ಪಕ ಸ್ಪಂದನೆ ಸಿಗಲಿಲ್ಲ. ಕಳೆದ ಎರಡು ತಿಂಗಳಿನಿಂದ ನಿರಂತರವಾಗಿ ಅಲೆದಾಡಿದರೂ ಹಿಟಾಚಿ ಸರಿಪಡಿಸಲಾಗಿಲ್ಲ ಎಂದು ಗಿರೀಶ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಮಸ್ಯೆ ಪರಿಹಾರಕ್ಕೆ ಮನವಿ ಮಾಡಲು ಗಿರೀಶ್ ಬೆಳಿಗ್ಗೆ ಶೋರೂಂಗೆ ಭೇಟಿ ನೀಡಿದರು. ಆದರೆ ತಕ್ಷಣ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಸಿಬ್ಬಂದಿಯನ್ನು ಹೊರಗೆ ಕಳುಹಿಸಿ ಶೋರೂಂಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದರು. ಅಲ್ಲದೆ, ಶೋರೂಂ ಬಾಗಿಲಿಗೆ ಹಿಟಾಚಿ ಯಂತ್ರವನ್ನು ಅಡ್ಡಲಾಗಿ ನಿಲ್ಲಿಸಿ ಗಮನ ಸೆಳೆದರು.

'ಹಿಟಾಚಿ ಸರಿಪಡಿಸಿ ಕೊಡಬೇಕು, ಇಲ್ಲವಾದರೆ ನಾವು ಕಟ್ಟಿದ ಹಣವನ್ನು ವಾಪಸ್ ನೀಡಬೇಕು. ಯಂತ್ರ ಖರೀದಿ ಮಾಡಲು ಲಕ್ಷಾಂತರ ರೂಪಾಯಿ ಸಾಲ ಮಾಡಿದ್ದೇನೆ. ಕಂಪನಿ ಹೇಳುವುದೊಂದು, ಖರೀದಿಸಿದ ನಂತರ ಮಾಡುವುದೊಂದು' ಎಂದು ಗಿರೀಶ್ ಆರೋಪಿಸಿದ್ದಾರೆ.

ಈ ಘಟನೆ ಸ್ಥಳೀಯರಲ್ಲಿ ಕುತೂಹಲ ಮೂಡಿಸಿದೆ. ಗ್ರಾಹಕ ಶೋರೂಂಗೆ ಬೀಗ ಹಾಕಿರುವುದನ್ನು ನೋಡಲು ಜನ ಆಗಮಿಸುತ್ತಿದ್ದಾರೆ. ಈ ಬಗ್ಗೆ

## ಎಸ್.ಎಸ್.ಎಲ್.ಸಿ ಪೂರ್ವ ಪರೀಕ್ಷೆ;

### ಶೇ.30 ಫಲಿತಾಂಶ ಪಡೆದ ಶಾಲಾ ಮುಖ್ಯಸ್ಥರಿಗೆ ನೋಟಿಸ್

ತುಮಕೂರು: ಎಸ್.ಎಸ್.ಎಲ್.ಸಿ ಎರಡನೇ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಶೇ.30ಕ್ಕಿಂತ ಕಡಿಮೆ ಫಲಿತಾಂಶದ ಎಲ್ಲ ಶಾಲೆಗಳ ಮುಖ್ಯ ಶಿಕ್ಷಕರಿಗೆ ನೋಟಿಸ್ ನೀಡುವಂತೆ ಶಾಲಾ ಶಿಕ್ಷಣ ಇಲಾಖೆಯ ಎರಡೂ ಜಿಲ್ಲೆಯ ಉಪ ನಿರ್ದೇಶಕರಿಗೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಸೂಚಿಸಿದ್ದಾರೆ.



ಮಾರ್ಚ್ 18ರಿಂದ ಎಸ್.ಎಸ್.ಎಲ್.ಸಿ ಪರೀಕ್ಷಾ ಸಿದ್ಧತೆ ಬಗ್ಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಂಗಳವಾರ ಸಭೆ ನಡೆಸಿ ಮಾತನಾಡಿದ ಅವರು, ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಕನಿಷ್ಠ ಫಲಿತಾಂಶ ನೀಡದ ಶಾಲಾ ಮುಖ್ಯ ಶಿಕ್ಷಕರು ಹಾಗೂ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ ಫಲಿತಾಂಶ ಕುಸಿದರೆ ಡಿಡಿಪಿಐ ಹಾಗೂ ಬಿಇಒ ಗಳೆ ಹೊಣೆಯಾಗಿರುವುದಾಗಿ ಪ್ರಗತಿ ಪರಿಶೀಲನಾ ಸಮಿತಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಸೂಚಿಸಿದಾಗ್ಯೂ ಫಲಿತಾಂಶದ ಬಗ್ಗೆ ತಲೆಕೆಡಿಸಿಕೊಳ್ಳದ ಅಧಿಕಾರಿಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಇತ್ತೀಚಿಗೆ ನಡೆದ ಎರಡನೇ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಕಳಪೆ ಫಲಿತಾಂಶ ನೀಡಿದ ಮುಖ್ಯ ಶಿಕ್ಷಕರಿಗೆ ನೋಟಿಸ್ ನೀಡುವಂತೆ ಸೂಚಿಸಿದರು.

ಇದೇ 23ರಿಂದ ಮೂರನೇ ಪೂರ್ವ ಸಿದ್ಧತಾ ಪರೀಕ್ಷೆ ಇರುವುದರಿಂದ ಮುಖ್ಯ ಪರೀಕ್ಷೆವರೆಗೆ ಪ್ರತಿ ದಿನವೂ ಬೆಳಗ್ಗೆ 6ಗಂಟೆಯಿಂದ ವಿಶೇಷ ತರಗತಿ ನಡೆಸುವಂತೆ ಸೂಚಿಸಿದರು.

ಜಿಲ್ಲೆಯಲ್ಲಿ ಕಳೆದ ವರ್ಷದ ಫಲಿತಾಂಶಕ್ಕಿಂತ ಉತ್ತಮ ಫಲಿತಾಂಶದ ನಿರೀಕ್ಷೆ ಇದ್ದು ಶೇ.100ಫಲಿತಾಂಶದ ಗುರಿ ಇರಬೇಕು. ಅದಕ್ಕೆ ಪೂರಕವಾದ ತಯಾರಿಯನ್ನು ಮಕ್ಕಳಿಗೆ ನೀಡಬೇಕು ಎಂದರು.

ಪರೀಕ್ಷಾ ಪದ್ಧತಿ ಅತ್ಯಂತ ಸುಲಭ ಇದೆ. ಈಗಲೂ ಮಕ್ಕಳನ್ನು ಪಾಸು ಮಾಡಿಸಲು ಆಗಲಿಲ್ಲ ಎಂದರೆ ತಾವು ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ ಎಂಬುದು ಸ್ಪಷ್ಟವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತುಮಕೂರು ನಗರ ಸೇರಿದಂತೆ ನಗರ ಪಟ್ಟಣ ಪ್ರದೇಶದಲ್ಲಿ ಶೂನ್ಯ ಫಲಿತಾಂಶದ ಶಾಲಾ ಮುಖ್ಯ ಶಿಕ್ಷಕರ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಇಂದಿನಿಂದ ಗುಣಮಟ್ಟದ ಫಲಿತಾಂಶಕ್ಕೆ ಚಟುವಟಿಕೆಗಳು ಆರಂಭವಾಗಬೇಕು ಎಂದ ಅವರು, ತಾವೂ ಅಚ್ಚರಿ ಭೇಟಿ ನೀಡಲಿದ್ದು ತಮ್ಮ ಕಾರ್ಯ ಚಟುವಟಿಕೆ ಪರಿಶೀಲಿಸುವುದಾಗಿ ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಶೇ.50ಕ್ಕಿಂತ ಕಡಿಮೆ ಫಲಿತಾಂಶದ ಶಾಲಾ ಮುಖ್ಯಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಎರಡೂ ಶೈಕ್ಷಣಿಕ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಸಭೆಯಲ್ಲಿ ಉಪಸ್ಥಿತರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

## ಜನಸಂಖ್ಯೆಗೆ ಅನುಗುಣವಾದ ಎಸ್ಸಿ / ಎಸ್ಟಿ ವರ್ಗಗಳ ಮೀಸಲಾತಿ ಹೆಚ್ಚಳ ಕಾನೂನು ಅನ್ನು ಸಂವಿಧಾನದ ಷಡ್ಯಲ್ 09ಕ್ಕೆ ಸೇರಿಸಿಲ್ಲ

ತುಮಕೂರು: ರಾಜ್ಯದ ಪರಿಶಿಷ್ಟ ಜಾತಿ, ವರ್ಗಗಳ ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಹೆಚ್ಚಳ ಮಾಡುವ ಸಂಬಂಧ ಸಂವಿಧಾನದ ಷಡ್ಯಲ್ 09ಕ್ಕೆ ಸೇರಿಸುವ ಕುರಿತು



ರಾಜ್ಯ ಸರಕಾರ 2023ರಲ್ಲಿಯೇ ಪತ್ರ ಬರೆದು ಒತ್ತಾಯಿಸಿದ್ದರೂ ಇದುವರೆಗೂ ಕೇಂದ್ರ ಸರಕಾರವಾಗಲಿ, ರಾಜ್ಯ ಸರಕಾರವಾಗಲಿ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲಎಂದು ಕರ್ನಾಟಕ ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆಯ ಅಧ್ಯಕ್ಷ ಹಾಗೂ ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಒತ್ತಾಯಿಸಿದ್ದಾರೆ.

ರಾಜ್ಯದ ಒಟ್ಟಾರೆ ಜನಸಂಖ್ಯೆಯಲ್ಲಿ ಪರಿಶಿಷ್ಟರು ಶೇ17 ಮತ್ತು ಪರಿಶಿಷ್ಟ ವರ್ಗದವರು ಶೇ07 ರಷ್ಟಿದ್ದು, ನ್ಯಾಯಮೂರ್ತಿ ನಾಗಮೋಹನ್ ದಾಸ್ ಸಮಿತಿಯ ವರದಿಯ ಅನ್ವಯ ಅಂದಿನ ಬಸವರಾಜ ಬೊಮ್ಮಾಯಿ ನೇತೃತ್ವದ ಸರಕಾರ ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ15 ರಿಂದ 17ಕ್ಕೆ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ3 ರಿಂದ 7ಕ್ಕೆ ಹೆಚ್ಚಳ ಮಾಡಿ ಆದೇಶ ಹೊರಡಿಸಿದ್ದಲ್ಲದೆ, ಇದನ್ನು ಸಂವಿಧಾನದ ಷಡ್ಯೂಲ್ 09ಕ್ಕೆ ಸೇರಿಸುವ ಮೂಲಕ ಪ್ರಶ್ನಾತೀತಗೊಳಿಸಬೇಕೆಂದು ಶಿಫಾರಸ್ಸು ಮಾಡಲಾಗಿದೆ .ಅಲ್ಲದೆ ಅಂದಿನ ಸರಕಾರದ ಮುಖ್ಯ ಕಾರ್ಯದರ್ಶಿಯಾಗಿದ್ದ ವಂದಿತಶರ್ಮ



ಅವರು ಸಹ ಕೇಂದ್ರ ಸರಕಾರಕ್ಕೆ ಪತ್ರ ಬರೆದು, ತುರ್ತಾಗಿ ಕ್ರಮ ಕೈಗೊಳ್ಳುವಂತೆ 2023ರ ಮಾರ್ಚ 23ರಂದು ಮನವಿ ಮಾಡಿದ್ದಾರೆ. ಆದರೆ ಕಳೆದ ಮೂರು ವರ್ಷಗಳಿಂದ ಕೇಂದ್ರವಾಗಲಿ, ರಾಜ್ಯವಾಗಲಿ ಇದರ ಬಗ್ಗೆ ಯಾವುದೇ ನಿರ್ಧಾರಕೈಗೊಂಡಿಲ್ಲ. ಸಾಮಾಜಿಕ ನ್ಯಾಯದ ಪರ ಎನ್ನುವ ಸಿದ್ದರಾಮಯ್ಯ ಸಹ ಇದುವರೆಗೂ ಯಾವುದೇ ಕ್ರಮ ಕೈಗೊಳ್ಳದಿರುವುದು ವಾಲ್ಮೀಕಿ ಸಮುದಾಯದ ಹಿನ್ನೆಡೆಗೆ ಕಾರಣವಾಗಿದೆ. ಹಾಗಾಗಿ ಶೀಘ್ರವೇ ಎರಡು ಸರಕಾರಗಳು ಈ ಬಗ್ಗೆ ತಮ್ಮ ಸ್ಪಷ್ಟ ನಿಲುವು ಪ್ರಕಟಿಸಬೇಕು. ಇಲ್ಲದಿದ್ದರೆ ಇಡೀ ಸಮುದಾಯ ಹೋರಾಟಕ್ಕೆ ಇಳಿಯುವುದು ಅನಿವಾರ್ಯಎಂದರು.

ಕೇಂದ್ರ ಮತ್ತು ರಾಜ್ಯದಲ್ಲಿ ವಾಲ್ಮೀಕಿ ಸಮುದಾಯವನ್ನು ಎಸ್ಟಿ ಜಾತಿ ಪಟ್ಟಿಗೆ ಸೇರಿಸಬೇಕೆಂದು ಸಚಿವರಾಗಿದ್ದ ವೀರಣ್ಣ ಮತ್ತು ನಾನು 1991ರಲ್ಲಿ ಅಂದಿನ ರಾಮಕೃಷ್ಣ ಹೆಗಡೆ ಮತ್ತು, ಆನಂತರದ ಹೆಚ್.ಡಿ.ದೇವೇಗೌಡ ಸರಕಾರ ಮೇಲೆ ಒತ್ತಡತಂದ ಪರಿಣಾಮ ಪಂಜಾಬ್ ನಜಾಟ್ ಮತ್ತು ಕರ್ನಾಟಕ ವಾಲ್ಮೀಕಿ ಸಮುದಾಯವನ್ನು ಚಂದ್ರಶೇಖರ್‌ಅವರು ಪ್ರಧಾನಿಯಾಗಿದ್ದಾಗ ಪರಿಶಿಷ್ಟ ಪಂಗಡಕ್ಕೆ ಸೇರಿಸಿ,ಮೀಸಲಾತಿ ಕಲ್ಪಿಸಲಾಯಿತು.ತದನಂತರ ಬೊಮ್ಮಾಯಿ ಸರಕಾರ ನ್ಯಾ.ನಾಗ ಮೋಹನ್‌ದಾಸ್ ಸಮಿತಿ ವರದಿ ಅನ್ವಯ ಎಸ್ಸಿಗೆ 17–ಎಸ್ಟಿಗೆ 07 ಮೀಸಲಾತಿ ಹೆಚ್ಚಳ ಮಾಡಿ ಮೂರು ವರ್ಷ ಕಳೆದರೂ ಜಾರಿಗೆ ಬಂದಿಲ್ಲ. ಇಂದು ಪರಿಶಿಷ್ಟ ಜಾತಿಯಿಂದ 36 ಜನ ಶಾಸಕರು, 05 ಜನ ಎಂ.ಎಲ್.ಸಿ.ಗಳಿದ್ದಾರೆ. ಪಂಗಡದಿಂದ 07 ಜನ ಶಾಸಕರು,2 ಜನ ವಿಧಾನಪರಿಷತ್ ಸದಸ್ಯರಿದ್ದಾರೆ. ಆದರೆಒಬ್ಬರೂ ಬಾಯಿ ಬಿಡುತ್ತಿಲ್ಲ.ಎಸ್ಸಿ, ಎಸ್ಟಿ ಮತ ಪಡೆದು ಆಯ್ಕೆಯಾದ ಜನರಲ್ ಕ್ಯಾಟಗೆರಿಯ ಶಾಸಕರು ಈ ಬಗ್ಗೆ ಬಾಯಿ ಬಿಡುತ್ತಿಲ್ಲ.ದಯಮಾಡಿ ನಿಮಗೆ ಕೈ ಮುಗ್ಗಿಯುತ್ತೇನೆ, ಮೀಸಲಾತಿಎಂಬುದು ಭೀಕ್ಷೆಯಲ್ಲ, ಅದು ನಮ್ಮ ಹಕ್ಕು ಹಾಗಾಗಿ ಸದನದ ಹೊರಗೆ ಮತ್ತು ಒಳಗೆ ಈ ಬಗ್ಗೆ ಮಾತನಾಡಿ, ಸಮುದಾಯಗಳ ಋಣ ನಿಮ್ಮ ಮೇಲಿದೆಎಂದು ವಿ.ಎಸ್.ಉಗ್ರಮತಾಕೀತು ಮಾಡಿದರು.

ಪ್ರಧಾನಮಂತ್ರಿ ಮೋದಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ನಮ್ಮ ಒತ್ತಾಯವೆನೆಂದರೆ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಳ ಮಾಡಿರುವ ಮೀಸಲಾತಿ ಪ್ರಮಾಣವನ್ನು ಸಂವಿಧಾನದ ಷಡ್ಯಲ್ 09ರ ಅಡಿಗೆತರುವ ಮೂಲಕ ರಕ್ಷಣೆ ನೀಡಬೇಕು .ಹಾಗೆಯೇ ಸಂವಿಧಾನ ಕಲಂ 15–16ಕ್ಕೆ ತಿದ್ದುಪಡಿತಂದು ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡಲು ಕ್ರಮ ಕೈಗೊಳ್ಳಬೇಕು .ಶೇ7.05ರಷ್ಟಿರುವ ಜನಸಂಖ್ಯೆಗೆ ಶೇ10ರಷ್ಟು ಮೀಸಲಾತಿ ಕಲ್ಪಿಸುವ ಇದ್ದತರಾತುರಿ ಪರಿಶಿಷ್ಟ ಜಾತಿ,ವರ್ಗಗಳ ಬಗ್ಗೆ ಏಕೆ ಇಲ್ಲ ಎಂಬ ಪ್ರಶ್ನೆ ನಮ್ಮದು. ಜನಸಂಖ್ಯೆಗೆಅನುಗುಣವಾಗಿ ಮೀಸಲಾತಿಗಾಗಿಎಂತಹ ಹೋರಾಟಕ್ಕೂ ಸಮುದಾಯ ಸಿದ್ದವಿದೆ.ಇದಕ್ಕಾಗಿಯಾವತ್ಯಾಗಕ್ಕೂ ನಾವು ಸಿದ್ದ ಎಂದು ವಿ.ಎಸ್.ಉಗ್ರಪ್ಪ ತಿಳಿಸಿದರು.

ರಾಜ್ಯ ಸರಕಾರ ಈ ಸಾಲಿನ ಬಜೆಟ್‌ನಲ್ಲಿ ಎಸ್.ಸಿ.ಪಿ ಮತ್ತುಟಿ.ಎಸ್.ಪಿ ಹಣವನ್ನು ಈ ಹಿಂದಿನ ರೀತಿಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡದೆ, ಎರಡು ಸಮುದಾಯಗಳ ಕಲ್ಯಾಣಕ್ಕೆ ಬಳಕೆ ಮಾಡಬೇಕು. ಅಲ್ಲದೆಎರಡು ಸಮುದಾಯಗಳ ಮಠಗಳ ಶೈಕ್ಷಣಿಕಅಭಿವೃದ್ದಿಗೆಅನುದಾನವನ್ನು ಹಂಚಿಕೆ ಮಾಡಬೇಕು.ಬಾಯಿ ಇದ್ದವನಿಗೆಎಲ್ಲಾಎಂಬಂತಹ ಸ್ಥಿತಿಗೆ ತಿಲಾಂಜಲಿ ನೀಡಬೇಕೆಂದು ವಿ.ಎಸ್.ಉಗ್ರಪ್ಪ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆಯಕಾರ್ಯಾಧ್ಯಕ್ಷಎಂ.ನರಸಿಂಹಯ್ಯ, ಖಜಾಂಚಿ ರಾಜಪ್ಪ, ಪ್ರಧಾನ ಕಾರ್ಯದರ್ಶಿ ಜಯಶ್ರೀ ಗುಡ್ಡಕಾಯ,ಉಪಾಧ್ಯಕ್ಷರಾದರಾಜಣ್ಣ.ಟಿ., ತುಮಕೂರಿನ ಹೆಚ್.ಸಿ.ಹನುಮಂತಯ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ತುಮಕೂರಿನಲ್ಲಿ ಸೈಬರ್ ವಂಚನೆ: 2025ರಲ್ಲಿ 10 ಕೋಟಿ ರೂ ನಷ್ಟ:

## ನಾಕೌಟ್ ಡಿಜಿಟಲ್ ಫ್ರಾಡ್' ಸೈಬರ್ ವಂಚನೆ ಜಾಗೃತಿ ಕಾರ್ಯಕ್ರಮ

ತುಮಕೂರು, : ಸೈಬರ್ ವಂಚನೆ ಪ್ರಕರಣಗಳಲ್ಲಿ ತುಮಕೂರಿನ ಜನರು ಸುಮಾರು 10 ಕೋಟಿ ಕಳೆದುಕೊಂಡಿದ್ದಾರೆ ಎಂದು ಸೈಬರ್ ಅಧಿಕಾರಿಗಳು ತಿಳಿಸಿದರು. ಖಾಸಗಿ ವಲಯದ ಬ್ಯಾಂಕೇತರ ಹಣಕಾಸು ಕಂಪನಿ ಬಜಾಜ್ ಫೈನಾನ್ಸ್ ಲಿಮಿಟೆಡ್ ತುಮಕೂರಿನಲ್ಲಿ ಆಯೋಜಿಸಿದ್ದ 'ನಾಕೌಟ್ ಡಿಜಿಟಲ್ ಫ್ರಾಡ್' ಸೈಬರ್ ವಂಚನೆ ಜಾಗೃತಿ ಕಾರ್ಯಕ್ರಮದಲ್ಲಿ ಈ ಮಾಹಿತಿ ನೀಡಲಾಯಿತು.

ಸಿರಾ ಗೇಟ್‌ನ ಅರಿವು ಇಂಟರ್ನ್ಯಾಷನಲ್ ಸ್ಕೂಲ್‌ನಲ್ಲಿ ಆಯೋಜಿಸಲಾದ ಈ ಕಾರ್ಯಕ್ರಮದಲ್ಲಿ ಸೈಬರ್ ಕ್ರೈಮ್ ಸಹಾಯಕ ಪೊಲೀಸ್ ಸಬ್ ಇನ್ಸ್ಪೆಕ್ಟರ್ ಶ್ರೀ ಇನಾಯತ್ ಉಲ್ಲಾ ಖಾನ್ ಮತ್ತು ತುಮಕೂರು ಸೈಬರ್ ಸೆಲ್‌ನ ಡಿಜಿಟಲ್ ವಂಚನೆ ತಡೆಗಟ್ಟುವಿಕೆ ಮತ್ತು ಜಾಗೃತಿ ಉಪಕ್ರಮಗಳನ್ನು ಮುನ್ನಡೆಸಲು ಹೆಸರುವಾಸಿಯಾದ ಸೈಬರ್ ಕ್ರೈಮ್ ಕಾನ್ಸ್ಟೇಬಲ್ ಶ್ರೀ ಶಿವಕುಮಾರ್ ಲಮಾನಿ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು. ಅರಿವು ಇಂಟರ್ನ್ಯಾಷನಲ್ ಶಾಲೆಯ ಮಾಲೀಕ ಶ್ರೀ ವಿ. ಜಗದೀಶ್ ಕುಮಾರ್ ಮತ್ತು ಇತರ ಗೌರವಾನ್ವಿತ ಅಧ್ಯಾಪಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸಭಿಕರನ್ನುದ್ದೇಶಿಸಿ ಮಾತನಾಡಿದ ಭಾಷಣಕಾರರು, ನಕಲಿ ಒಟಿಪಿ ಹಗರಣಗಳು, ಫಿಷಿಂಗ್, ಡಿಜಿಟಲ್ ಬಂಧನ, ಸಾಲ ವಂಚನೆ, ಪಿಂಚಣಿ ವಂಚನೆ ಮತ್ತು ಇತರ ಆರ್ಥಿಕ ವಂಚನೆಗಳು ಸೇರಿದಂತೆ ತುಮಕೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪ್ರಚಲಿತದಲ್ಲಿರುವ ವಂಚನೆಗಳನ್ನು ಎತ್ತಿ ತೋರಿಸಿದರು.

ತುಮಕೂರಿನಲ್ಲಿ ಎಲ್ಲಾ ವಯೋಮಾನದವರ ಸಂತ್ರಸ್ತರು ಕಳೆದ ವರ್ಷ ಆನ್ಲೈನ್ ವಂಚನೆಯಿಂದ ಒಟ್ಟಾರೆಯಾಗಿ 10 ಕೋಟಿ ರೂ. ಗಿಂತ ಹೆಚ್ಚು ಹಣವನ್ನು ಕಳೆದುಕೊಂಡಿದ್ದಾರೆ ಎಂದು ಸೈಬರ್ ಕ್ರೈಮ್ ಅಧಿಕಾರಿಗಳು ಬಹಿರಂಗಪಡಿಸಿದ್ದಾರೆ. "ಅಧಿಕೃತ ಸೈಬರ್ ಕ್ರೈಮ್ ಪೋರ್ಟಲ್ ಮೂಲಕ ಸುಮಾರು 3,000 ದೂರುಗಳನ್ನು ಸಲ್ಲಿಸಲಾಗಿದ್ದರೂ, ಕೇವಲ 250–300 ಸಂತ್ರಸ್ತರು ಮಾತ್ರ ಔಪಚಾರಿಕ ದೂರು ದಾಖಲಿಸಲು ವೈಯಕ್ತಿಕವಾಗಿ ಪೊಲೀಸ್ ಠಾಣೆಗೆ ಭೇಟಿ ನೀಡಿದರು" ಎಂದು ಅವರು ಹೇಳಿದರು.

ಸಾರ್ವಜನಿಕರು ಹಿಂಜರಿಕೆಯಿಲ್ಲದೆ ಮುಂದೆ ಬರಬೇಕೆಂದು




ಒತ್ತಾಯಿಸಿದ ಅವರು, "ಪೊಲೀಸ್ ಠಾಣೆಯಲ್ಲಿ ದಾಖಲಾದ ದೂರು ವಂಚಕರನ್ನು ಪತ್ತೆಹಚ್ಚಲು ಅಗತ್ಯವಾದ ನಿರ್ಣಾಯಕ ಮಾಹಿತಿಯನ್ನು ನಮಗೆ ಒದಗಿಸುತ್ತದೆ. ದುರದೃಷ್ಟವಶಾತ್, ಅನೇಕ ಮೋಸಹೋದವರು ಮೌನವಾಗಿರುತ್ತಾರೆ ಅಥವಾ ಸಾಮಾಜಿಕ ಭಯದಿಂದಾಗಿ ದೂರುಗಳನ್ನು ದಾಖಲಿಸುವುದನ್ನು ತಪ್ಪಿಸುತ್ತಾರೆ. ಸೈಬರ್ ಕ್ರೈಮ್ ಪೊಲೀಸ್ ಅಧಿಕಾರಿ ಶಿವಕುಮಾರ್ ಮಾತನಾಡಿ, ಮೋಸಹೋದವರಲ್ಲಿ ಹೆಚ್ಚಿನವರು ಸುಶಿಕ್ಷಿತ ವ್ಯಕ್ತಿಗಳು ಎಂದು ಹಂಚಿಕೊಂಡಿದ್ದಾರೆ. ವೈದ್ಯರು, ಉದ್ಯಮಿಗಳು, ಬ್ಯಾಂಕ್ ನೌಕರರು ಮತ್ತು ನಿವೃತ್ತ ವೃತ್ತಿಪರರನ್ನು ಆಗಾಗ್ಗೆ ಗುರಿಯಾಗಿಸಲಾಗುತ್ತದೆ. ಇತ್ತೀಚೆಗಷ್ಟೇ ಉದ್ಯಮಿಯೊಬ್ಬರು ಹೂಡಿಕೆ ಹಗರಣದಲ್ಲಿ 73 ಲಕ್ಷ ರೂ. ವಂಚನೆಯ ಕುರಿತು ತಕ್ಷಣವಾಗಿ ವರದಿ ಮಾಡಿದ ನಿರ್ಣಾಯಕ ಪಾತ್ರದ ಬಗ್ಗೆ ತಿಳಿಸುತ್ತಾ, ವಂಚನೆ ಸಂಭವಿಸಿದ ನಂತರದ ಮೊದಲ ಗಂಟೆಯಾದ 'ಗೋಲ್ಡನ್ ಅವರ್'ನ ಮಹತ್ವವನ್ನು ಅವರು ಒತ್ತಿ ಹೇಳಿದರು. "ಸಹಾಯವಾಣಿ 1930 ಗೆ ಕರೆ ಮಾಡುವ ಮೂಲಕ ಘಟನೆಯ ಬಗ್ಗೆ ತಕ್ಷಣ ವರದಿ ಮಾಡಿ. ಸಮಯೋಚಿತ ವರದಿಯು ವಹಿವಾಟನ್ನು ಟ್ರ್ಯಾಕ್ ಮಾಡಲು ಮತ್ತು ಹಣವನ್ನು ಸ್ಥಗಿತಗೊಳಿಸಲು ನಮಗೆ ಅನುಮತಿಸುತ್ತದೆ. ಪ್ರಕರಣಗಳು ತ್ವರಿತವಾಗಿ ವರದಿಯಾದಾಗ ಕಳೆದುಕೊಂಡ ಹಣ ವಾಪಾಸ್ ಸಿಗುವ ಸಾಧ್ಯತೆಗಳು ಸುಮಾರು ಶೇ.80 ರಷ್ಟಿರುತ್ತವೆ" ಎಂದು ಅವರು ವಿವರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಎಎಫ್‌ಎಲ್ ವಕ್ತಾರರು,"ನಮ್ಮ ಗ್ರಾಹಕರ ಆರ್ಥಿಕ ಸುರಕ್ಷತೆ ನಮಗೆ ಅತ್ಯಂತ ಮುಖ್ಯವಾಗಿದೆ. ನಾವು ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಮತ್ತು ನಾಗರಿಕರೊಂದಿಗೆ ನೆಲದ ಸಂವಹನಗಳ ಮೂಲಕ ನಿರಂತರವಾಗಿ ಆಲೈನ್ ಮತ್ತು ಆಲೈನ್ ಸಲಹೆಗಳನ್ನು ನೀಡುತ್ತಿದ್ದೇವೆ, ಪ್ರತಿಯೊಬ್ಬರೂ ಸೈಬರ್ ವಂಚನೆಗಳಿಂದ ಸುರಕ್ಷಿತವಾಗಿರಲು ಜಾಗೃತಿ ಮೂಡಿಸುತಿದ್ದೇವೆ ನಾಗರಿಕರು ಅನುಮಾನಾಸ್ಪದ ಇಮೇಗಳು, ಎಎಂಎಗಳು, ಲಿಂಗಳು, ಕ್ಯೂಆರ್ ಕೋಗಳನ್ನು ಕ್ಲಿಕ್ ಮಾಡುವುದು ಮತ್ತು ಅಪರಿಚಿತ ಮೂಲಗಳಿಂದ ಅಪ್ಲಿಕೇಶಗಳನ್ನು ಡೌಲೋಡ್ ಮಾಡುವುದನ್ನು ನಿಲ್ಲಿಸಬೇಕು . ದೇಶದ 100 ಪ್ರಮುಖ ನಗರಗಳು ಮತ್ತು ಪಟ್ಟಣಗಳಲ್ಲಿ ಸಂವಾದಾತ್ಮಕ ಕಾರ್ಯಾಗಾರಗಳು, ಡಿಜಿಟಲ್ ಜಾಗೃತಿ ಅಭಿಯಾನಗಳು ಮತ್ತು ಸಮುದಾಯ ಸಂಪರ್ಕ ಕಾರ್ಯಕ್ರಮಗಳ ಸರಣಿಯನ್ನು ಹಮ್ಮಿಕೊಂಡಿದ್ದೇವೆ. " ಎಂದು ಹೇಳಿದರು.









# ಸತ್ಯದ ಜೊತೆಗೆ ಬದುಕುವವನು ಯಾರಿಗೂ ಹೆದರಬೇಕಾಗಿಲ್ಲ: ಇದು ಸಾರ್ವತ್ರಿಕ ಸತ್ಯ

ಕ್ರಿಸ್ತ ಪೂರ್ವ 399 ಇಸವಿಯ ಆಸುಪಾಸಿನಲ್ಲಿ ಬದುಕಿದ್ದ ಪಾಶ್ಚಾತ್ಯ ಸಂಸ್ಕೃತಿಯ ಅತ್ಯದ್ಬುತ ಚಿಂತಕ, ಗ್ರೀಕ್ ದೇಶದ ಅಥೆನ್ಸ್ ನ ಈ ಸಾಕ್ರೆಟಿಸ್. ಮತ್ತೊಬ್ಬ ಅದ್ಭುತ ತತ್ವಜ್ಞಾನಿ ಪ್ಲೋಟೋ ಕೂಡ ಇವರ ಶಿಷ್ಯರೇ ಆಗಿದ್ದರು. ಬಹುತೇಕ ಭಾರತದ ಗೌತಮ ಬುದ್ಧ, ಚೀನಾದ ಕನ್ಫ್ಯೂಷಿಯಸ್, ಲಾವೋತ್ಸೇ ಎಂಬ ಜಗತ್ತಿನ ಅತ್ಯದ್ಭುತ ಚಿಂತಕರ ರೀತಿಯಲ್ಲಿಯೇ ಕ್ರಿಸ್ತಪೂರ್ವ ಕಾಲಘಟ್ಟದ, ನಾಗರಿಕತೆಯ ಪ್ರಾರಂಭದ ಹಂತದಲ್ಲೇ ಮನುಷ್ಯನ ಅಂತಃಶಕ್ತಿ ಮತ್ತು ಸಾಮಾಜಿಕ ವ್ಯವಸ್ಥೆಯ ಬಗ್ಗೆ ಅತ್ಯಮೂಲ್ಯ ಸಾರ್ವತ್ರಿಕ ವಾಸ್ತವಗಳನ್ನು ಹೇಳಿದ್ದಾರೆ. ಅವುಗಳಲ್ಲಿ ಒಂದು ಸತ್ಯದ ಜೊತೆಗೆ ಬದುಕುವವನು ಯಾರಿಗೂ ಹೆದರಬೇಕಾಗಿಲ್ಲ.

ಇದೀಗ 2026ರಲ್ಲಿ 21ನೆಯ ಶತಮಾನದ ಕಾಲು ಭಾಗ ಪೂರೈಸಿ ಬದುಕುತ್ತಿರುವ ಈ ಸಂದರ್ಭದಲ್ಲಿ ಈ ವಾಕ್ಯವನ್ನು ಮರು ವ್ಯಾಖ್ಯಾನ ಮಾಡಬೇಕಾದ ಪರಿಸ್ಥಿತಿಯಲ್ಲಿ ನಾವಿದ್ದೇವೆ.

ಸತ್ಯ ಎಂದರೇನು ಎಂಬುದೇ ಪ್ರಶ್ನಾರ್ಥಕವಾದ ಕಾಲಘಟ್ಟದಲ್ಲಿ ನಾವಿದ್ದೇವೆ. ಸತ್ಯ ಒಂದೇ ಎಂಬುದೇನೋ ಸಾರ್ವಕಾಲಿಕ ಸ್ಥಿರ ಭಾವ ನಿಜ, ಆದರೆ ಈ ಕಾಲಘಟ್ಟದಲ್ಲಿ ಸತ್ಯದ ವಾಸ್ತವಿಕ ಅರ್ಥವೇ ಬದಲಾಗಿದೆ. ಅನೇಕ ವಿಭಿನ್ನ ದೃಷ್ಟಿಕೋನಗಳು ಸತ್ಯವನ್ನೇ ಮರೆಮಾಚುತ್ತಿವೆ. ಸತ್ಯವನ್ನೇ ವಿವಿಧ ದೃಷ್ಟಿಯಲ್ಲಿ ವ್ಯಾಖ್ಯಾನಿಸುತ್ತಿವೆ, ಸತ್ಯವನ್ನೇ ಮರು ಚಿಂತನೆಗೆ ಒಳಪಡಿಸುತ್ತಿವೆ, ಸತ್ಯವನ್ನೇ ಹೊಸದಾಗಿ ಅರ್ಥೈಸಲಾಗುತ್ತಿದೆ.

ಮಹಾತ್ಮ ಗಾಂಧಿಯವರ ತಮ್ಮ ಬದುಕಿನಲ್ಲಿ ಸತ್ಯದೊಂದಿಗೆ ಮಾಡಿದ ಪ್ರಯೋಗವೇ ಪ್ರಶ್ನಾರ್ಹ ಮತ್ತು ಹುಚ್ಚುತನದ ಪರಮಾವಧಿ ಎನ್ನುವಂತೆಯೂ ಚಿತ್ರಿಸಲಾಗುತ್ತಿದೆ.

ಸತ್ಯಕ್ಕೆ ಸಾವಿಲ್ಲ, ನಿಜ.

ಆದರೆ ಸತ್ಯಕ್ಕೆ ಆಗಾಗ ಸಾಂಕ್ರಾಮಿಕ ಖಾಯಿಲೆ ಬರುತ್ತದೆ. ಕೆಲವೊಮ್ಮೆ ನಿರ್ಲಕ್ಷ್ಯಕ್ಕೆ ಒಳಗಾಗುತ್ತದೆ. ಹಲವೊಮ್ಮೆ ತಿರಸ್ಕರಿಸಲ್ಪಡುತ್ತದೆ. ಸುಳ್ಳಿಗೆ ಬೆದರುತ್ತದೆ. ದ್ವೇಷಕ್ಕೆ ಬಲಿಯಾಗುತ್ತದೆ. ಕೋಪಕ್ಕೆ ತುತ್ತಾಗುತ್ತದೆ. ಅಸೂಯೆಗೆ ಮಣಿಯುತ್ತದೆ. ಸ್ವಾರ್ಥಕ್ಕೆ ಸೆರೆಯಾಗುತ್ತದೆ. ಅದು ಸತ್ಯದ ನಿಶ್ಯಕ್ತಿಯಲ್ಲ, ಸತ್ಯ ಅತ್ಯಂತ ಪ್ರಬಲ, ಅದು ಜನರ ಮಾನಸಿಕ ದೌರ್ಬಲ್ಯ.

ವಿಷಯ ಏನೇ ಇರಲಿ, ಕಾಲದ ಪಯಣದಲ್ಲಿ ಇರಬಹುದಾದ ಸಾರ್ವಕಾಲಿಕ ಸತ್ಯ, ತತ್ತಕ್ಷಣದ ಸತ್ಯ, ಸಾಂಧರ್ಬಿಕ ಸತ್ಯ, ಘಟನೆಯ ಸತ್ಯ, ಊಹಾತ್ಮಕ ಸತ್ಯ, ಯಾರಿಗೂ ಎಂದಿಗೂ ಸ್ಪಷ್ಟವಾಗದ ಸತ್ಯ ಹೀಗೆ ಸತ್ಯದ ನಾನಾ ಮುಖಗಳು ಅಗ್ನಿ ಪರೀಕ್ಷೆಗೆ ಒಳಗಾಗುತ್ತಾ ತನ್ನ ಅಸ್ತಿತ್ವಕ್ಕಾಗಿ ಸದಾ ಹೋರಾಡುತ್ತಲೇ ಇರುತ್ತದೆ. ಈಗ ನಾವು ಸತ್ಯದೊಂದಿಗೆ ಬದುಕುತ್ತಿದ್ದೇವೆ ಎಂದೇ ಭಾವಿಸೋಣ. ಹಾಗಾದರೆ ನಾವು ಯಾರಿಗೂ ಹೆದರಬೇಕಾಗಿಲ್ಲವೇ ?

ಹೆದರಿಕೆ ಎಂಬುದು ಕೂಡ ಒಂದು ಭಾವ. ಮನುಷ್ಯನಲ್ಲಿ ಅಂತರ್ಗತವಾಗಿರುವ ಭಾವಗಳಲ್ಲಿ ಹೆದರಿಕೆಯೂ ಒಂದು. ಅದು ಬಹುತೇಕ ಸಂದರ್ಭಗಳಲ್ಲಿ ಅಂತರ್ಮುಖಿಯಾಗಿ ಪ್ರಕಟವಾಗುತ್ತದೆ. ನೀವು ಎಷ್ಟೇ ಸತ್ಯವಂತರು, ಧೈರ್ಯವಂತರಾಗಿದ್ದರು ಸಹ ಭಯ ಎಂಬ ಭಾವವು ಆಗಾಗ ವ್ಯಕ್ತವಾಗುತ್ತಲೇ ಇರುತ್ತದೆ. ಇದನ್ನು ಹೊರತುಪಡಿಸಿಯು, ನಾವು ತುಂಬಾ ಪ್ರಾಮಾಣಿಕರಾಗಿದ್ದಾಗಲೂ ಈ ಆಧುನಿಕ ಕಾಲದಲ್ಲಿ ಸಂಕೀರ್ಣ ವೈಯಕ್ತಿಕ, ಕೌಟುಂಬಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಇಲ್ಲ ಸಲ್ಲದ ಸುಳ್ಳುಗಳು, ಆರೋಪಗಳು, ಕಾನೂನಾತ್ಮಕ ಒತ್ತಡಗಳು, ಉದ್ದೇಶಪೂರ್ವಕವಾಗಿ ಸೃಷ್ಟಿಸಲಾದ, ನಮ್ಮನ್ನು ಹಣಿಯಲೆಂದೇ ಹುಟ್ಟುಹಾಕಿದ ಘಟನೆಗಳು ಎಲ್ಲವೂ ಸೇರಿ ತೀರಾ ಒತ್ತಡ ಹಾಕಿದಾಗ ಭಯ ಸಹಜವಾಗಿ




ಆಗುತ್ತದೆ..

ನಾವು ಪ್ರಾಮಾಣಿಕರೆಂಬುದು ನಿಜವೇ ಆಗಿದ್ದರೂ ಯಾವ ರೂಪದಲ್ಲಿ ಬೇಕಾದರೂ ಆರೋಪ ಹೊರಿಸುವ ಸಾಧ್ಯತೆ ಇರುವುದರಿಂದ ಭಯ ಎಂಬುದು ಇದ್ದೇ ಇರುತ್ತದೆ. ಉದಾಹರಣೆಗೆ ನಾವೊಂದು ವ್ಯವಹಾರ ಮಾಡುತ್ತಿರುತ್ತೇವೆ. ಎಲ್ಲವನ್ನು ಅತ್ಯಂತ ಪಾರದರ್ಶಕ, ತತ್ವ, ಸತ್ಯ ನಿಷ್ಠೆಯಿಂದಲೇ ಮಾಡುತ್ತಿರುತ್ತೇವೆ. ಆದರೆ ಇನ್ಯಾರೋ ನಮ್ಮ ವಿರೋಧಿಗಳು ನಮ್ಮನ್ನು ಸೋಲಿಸಲು ನಮ್ಮೊಂದಿಗೆ ಬೇರೆ ರೀತಿಯ ಅನೈತಿಕ, ಕಾನೂನುಬಾಹಿರ ಚಟುವಟಿಕೆ ನಡೆಸಿ, ಇನ್ನೇನೋ ಅಪಾಯಕಾರಿ ವಸ್ತುಗಳನ್ನು ಅಡಗಿಸಿ, ಪೋಲೀಸರಿಗೆ ಮಾಹಿತಿ ನೀಡಿ ನಮ್ಮನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸುತ್ತಾರೆ. ಆಗ ಸಾಕ್ಷಿ, ಆಧಾರಗಳು ಸಹ ನಮಗೆ ವಿರುದ್ಧವಾಗಿ ಇರುತ್ತದೆ. ನಮ್ಮದು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಣ್ಣ ತಪ್ಪಿಲ್ಲದಿದ್ದರೂ ನಮಗೆ ಶಿಕ್ಷೆಯಾಗುತ್ತದೆ.

ಅಲ್ಲಿಗೆ ಸತ್ಯ ನಿಮ್ಮೊಳಗೆ, ನಿಮಗೊಬ್ಬರಿಗೆ ಮಾತ್ರ ತಿಳಿದಿರುತ್ತದೆ. ಆದರೆ ಇಡೀ ಜಗತ್ತಿಗೆ ನೀವು ಅಪರಾಧಿಯಾಗುತ್ತೀರಿ. ಆಗಲೂ ನೀವು ಭಯಪಡದೆ ಜೈಲಿನಲ್ಲಿ ಕೊಳೆತು ಜೀವ ತ್ಯಾಗ ಮಾಡುವಿರಾದರೆ ನೀವು ಮನುಷ್ಯ ರೂಪದ ವಿಶೇಷ ವ್ಯಕ್ತಿಗಳಾಗಿರುತ್ತೀರೇ ಹೊರತು ಸಾಮಾನ್ಯ ನಾಗರಿಕ ಸಮಾಜಕ್ಕೆ ಈ ಮಾತು ಅನ್ವಯವಾಗುವುದಿಲ್ಲ. ಇದು ಅನೇಕ ರಾಜಕೀಯ, ಆರ್ಥಿಕ, ಸಾಮಾಜಿಕ ವಿಷಯಗಳಿಗೆ ಹೆಚ್ಚು ಅನ್ವಯಿಸುತ್ತದೆ.

ಅಂದರೆ ಸಾಕ್ರೆಟಿಸ್ ಕಾಲಕ್ಕೂ, ಈ ಕಾಲಕ್ಕೂ ಜಗತ್ತಿನಲ್ಲಿ ಆಗಿರುವ ಬದಲಾವಣೆಗಳನ್ನು ಗಮನಿಸಿ. ಆಗ ಮಾನವೀಯ ಮೌಲ್ಯಗಳು ತುಂಬಿ ತುಳುಕುತ್ತಿದ್ದಾಗ, ಇಡೀ ವ್ಯವಸ್ಥೆ, ಮೌಲ್ಯಗಳಲ್ಲಿ ಮುಂದುವರೆಯುತ್ತಿದ್ದಾಗ ಸತ್ಯಕ್ಕೆ ಅಷ್ಟರಮಟ್ಟಿಗೆ ಶಕ್ತಿ ಇತ್ತು. ಬಹುಶಃ ಭಾರತದಲ್ಲಿ ಮಹಾತ್ಮ ಗಾಂಧಿಯವರ ಕಾಲಘಟ್ಟದವರೆಗೆ ಸತ್ಯ ಒಂದಷ್ಟು ಉಸಿರಾಡುತ್ತಿತ್ತು. ಸತ್ಯವಂತರಿಗೆ ಭಯವೂ ಕಡಿಮೆ ಇತ್ತು. ಆದರೆ ಈಗಿನ ಕಾಲಘಟ್ಟದಲ್ಲಿ ಸತ್ಯವಂತರೇ ಹೆಚ್ಚು ಭಯಪಡಬೇಕಾಗಿದೆ.

ಏಕೆಂದರೆ ಈ ಜಗತ್ತು ಮೌಲ್ಯಗಳನ್ನು ದಾಟಿ ಕೃತಕ ಬುದ್ಧಿಮತ್ತೆಯ ಸಂದರ್ಭದಲ್ಲಿ, ವಿರುದ್ಧ ಮೌಲ್ಯಗಳು ಮಾನ್ಯತೆ ಪಡೆಯುತ್ತಿರುವ ಸ್ಥಿತಿಯಲ್ಲಿದೆ. ಈಗ ಸಾಕ್ರೆಟಿಸ್ ಕಾಲದಲ್ಲಿ ಊಹಿಸಲು ಸಾಧ್ಯವಾಗದ ಆಧುನಿಕ ತಂತ್ರಜ್ಞಾನ, ಅತಿಯಾದ ಸ್ವೇಚ್ಛಾಚಾರ, ಹಿಂಸೆ, ವಂಚನೆ, ಇಡೀ ಸಮಾಜದ ನೈತಿಕತೆ ಕೆಳ ಹಂತಕ್ಕೆ ಇಳಿದು " ಖಣಿಭಿಭಿಞ ಚಿಣ ಚಿಟಿಥಿ ಛಿಠಣ " ಎಂಬ ಯಶಸ್ಸಿನ ಸಿದ್ದಾಂತ, ಅಪಾರ ಕೃತ್ರಿಮತೆ, ಹಣ ಕೇಂದ್ರೀಕೃತ ಸಮಾಜವಾಗಿ ದೇಹ, ಮನಸ್ಸುಗಳು ಮಲಿನಗೊಂಡಿರುವಾಗ ಸತ್ಯ ಮತ್ತು ಧೈರ್ಯ ಪಾಲನೆ ತುಂಬಾ ತುಂಬಾ ಕಷ್ಟ.

ಸತ್ಯ ಇಲ್ಲವೇ ಇಲ್ಲ ಎಂದಲ್ಲ, ವೈಯಕ್ತಿಕ ಮಟ್ಟದಲ್ಲಿ ಇರಬಹುದು. ಆದರೆ ಸಾರ್ವಜನಿಕವಾಗಿ ಅದು ಅಷ್ಟು ಸುಲಭವಲ್ಲ.

ತೀರಾ ಆಳವಾಗಿ ಯೋಚಿಸಿದಾಗ ಈಗಲೂ ಸಾಕ್ರೆಟಿಸ್ ಅವರ ಮಾತುಗಳು ನಿಜವೇ ಆಗಿದೆ, ಆದರ್ಶವೇ ಆಗಿದೆ. ಸತ್ಯ ಪಥದಲ್ಲಿ ಬದುಕುತ್ತಿರುವವರು ಯಾರಿಗೂ ಹೆದರುವ ಅಗತ್ಯವಿಲ್ಲ. ಆದರೆ ಅದು ತೀರಾ ಖಾಸಗಿ ಮತ್ತು ವೈಯಕ್ತಿಕವಾದದ್ದು. ಸಾರ್ವಜನಿಕ ಜೀವನದಲ್ಲಿ ಅದನ್ನು ಅನುಸರಿಸುವುದು ತುಂಬಾ ತುಂಬಾ ಕಷ್ಟ. ಕೆಲವೊಮ್ಮೆ ಕೌಟುಂಬಿಕವಾಗಿಯೂ ಸಂಪೂರ್ಣ ಸತ್ಯವಂತರಾಗಿರಲು ಸಾಧ್ಯವಿಲ್ಲ. ಆಗಲೂ ಸ್ವಲ್ಪ ಭಯಪಡಲೇಬೇಕಾಗುತ್ತದೆ. ಇಲ್ಲದಿದ್ದರೆ ಸಂಸಾರ ಉಳಿಯುವುದಿಲ್ಲ. ಸಂಸಾರವೇ ಉಳಿಯದ ಸತ್ಯದಿಂದ ಪ್ರಯೋಜನ ಇಲ್ಲ ಎನಿಸುತ್ತದೆ. ವ್ಯಾವಹಾರಿಕ ಸುಳ್ಳುಗಳು ಅನಿವಾರ್ಯ. ಅಪಾಯಕಾರಿ ಸುಳ್ಳುಗಳು ಅಪರಾಧ.

ಒಟ್ಟಿನಲ್ಲಿ ವ್ಯವಹಾರಿಕ ಜಗತ್ತನ್ನು ನೋಡಿದಾಗ ಸಾಕ್ರೆಟಿಸ್ ಮಾತುಗಳು ವಾಸ್ತವದಿಂದ ದೂರವಿದೆ. ಆಳದಲ್ಲಿ ಮಾತ್ರ ಆದರ್ಶವಾಗಿ ಉಳಿದಿದೆ. ಅಪರೂಪದಲ್ಲಿ ಯಾರೋ ಕೆಲವರಲ್ಲಿ ಮಾತ್ರ ಇನ್ನೂ ಜೀವಂತವಿದೆ....

ಕಾಲಾಯ ತಸ್ಮೈ ನಮಃ.......

ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ,
ಮನಗಳಲ್ಲಿ – ಮನೆಗಳಲ್ಲಿ – ಮತಗಳಲ್ಲಿ

# ಮಂಗಳ ಗ್ರಹಕ್ಕೆ 24 ವರ್ಷ ವಯಸ್ಸಿನ ಅಲಿಸಾ ಕಾರ್ಸನ್: ಭೂಮಿಗೆ ತಿರುಗಿ ಬಾರದ ಪಯಣ...!

ಕೇವಲ 24 ವರ್ಷ ವಯಸ್ಸಿನ ಅಲಿಸಾ ಕಾರ್ಸನ್ ತನ್ನ ಇಡೀ ಜೀವನವನ್ನು ಬಾಹ್ಯಾಕಾಶಕ್ಕೆ ತಯಾರಿ ಮಾಡಲು ಕಳೆದಿದ್ದಾಳೆ. ನಾಸಾ ಕಾರ್ಯಕ್ರಮಗಳಿಂದ ಹಿಡಿದು ಮಂಗಳ ಸಿಮ್ಯುಲೇಶನ್ ಕಾರ್ಯಾಚರಣೆಗಳವರೆಗೆ, ದೀರ್ಘಾವಧಿಯ ಅಥವಾ ಏಕಮುಖ ಕಾರ್ಯಾಚರಣೆಗಳನ್ನು ಒಳಗೊಂಡಂತೆ ಭವಿಷ್ಯದ ಮಂಗಳ ದಂಡಯಾತ್ರೆಗಳಿಗೆ ಸಂಬಂಧಿಸಿದ ಪ್ರಬಲ ಮಾನವ ಅಭ್ಯರ್ಥಿಗಳಲ್ಲಿ ಅವಳು ಒಬ್ಬಳು.ಭೂಮಿಯನ್ನು ಬಿಟ್ಟು ಹೋಗುವುದನ್ನು ಕಲ್ಪಿಸಿಕೊಳ್ಳಿ, ನೀಲಿ ಆಕಾಶವಿಲ್ಲ. ಕುಟುಂಬವಿಲ್ಲ. ಹಿಂತಿರುಗುವಿಕೆ ಇಲ್ಲ.

ಕೇವಲ ಧೈರ್ಯ, ತ್ಯಾಗ ಮತ್ತು ಇತಿಹಾಸದಲ್ಲಿ ಒಂದು ಸ್ಥಾನ ಎಲ್ಲರೂ ಇಷ್ಟೊಂದು ದೊಡ್ಡ ಕನಸು ಕಾಣುವ ಧೈರ್ಯವಂತರಲ್ಲ. ಮಾನವ ಇತಿಹಾಸವನ್ನು ಬದಲಾಯಿಸಲು ನೀವು ಭೂಮಿಯನ್ನು ಶಾಶ್ವತವಾಗಿ ಬಿಡುತ್ತೀರಾ?

ಅಲಿಸಾ ಕಾರ್ಸನ್ ಜೊತೆ ಪ್ರಶ್ನೋತ್ತರ

ಲೂಸಿಯಾನದಲ್ಲಿ ಜನಿಸಿ ನೆಲೆಸಿರುವ 18 ವರ್ಷದ ಅಲಿಸಾ ಕಾರ್ಸನ್, 2030 ರ ದಶಕದ ಆರಂಭದಲ್ಲಿ ಮಂಗಳ ಗ್ರಹಕ್ಕೆ ಹೋದ ಮೊದಲ ಕೆಲವೇ ಜನರಲ್ಲಿ ಒಬ್ಬರಾಗುವ ಸಾಧ್ಯತೆಯಿದೆ. ಕಾರ್ಸನ್ ಕೇವಲ 15 ವರ್ಷ ವಯಸ್ಸಿನವಳಿದ್ದಾಗ ಅಕ್ಟೋಬರ್ 2016 ರಲ್ಲಿ ಅಡ್ವಾನ್ಸ್ಡ್ ಪೊಸಮ್ ಅಕಾಡೆಮಿಗೆ ಸೇರಿಕೊಂಡರು, ಪದವಿ ಪಡೆದು ಬಾಹ್ಯಾಕಾಶಕ್ಕೆ ಹೋಗಲು ಪ್ರಮಾಣೀಕರಿಸಲ್ಪಟ್ಟರು – ಅವರು ತರಬೇತಿಯಲ್ಲಿರುವ ವಿಶ್ವದ ಅತ್ಯಂತ ಕಿರಿಯ ಗಗನಯಾತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಅವರು ನಾಸಾದ 19 ಬಾಹ್ಯಾಕಾಶ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ ಮತ್ತು ಎಲ್ಲಾ ತಾಣಗಳಿಗೆ ಭೇಟಿ ನೀಡಿ ನಾಸಾ ಪಾಸ್‌ಪೋರ್ಟ್ ಕಾರ್ಯಕ್ರಮವನ್ನು ಪೂರ್ಣಗೊಳಿಸಿದ ವಿಶ್ವದ ಏಕೈಕ ವ್ಯಕ್ತಿ.

ಮೂವಿಂಗ್ ಟು ಮಾರ್ಸ್ ಪ್ರದರ್ಶನವನ್ನು ಗುರುತಿಸಲು, ಡಿಸ್ನೆನ್ ಮ್ಯೂಸಿಯಂ ಅಲಿಸಾ ಅವರ ಸ್ಫೂರ್ತಿದಾಯಕ ಕಥೆಯ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಅವರನ್ನು ಭೇಟಿ ಮಾಡಿತು.

**ಪ್ರಶ್ನೆ: 2033 ರಲ್ಲಿ ಮಂಗಳ ಗ್ರಹಕ್ಕೆ ಕಾಲಿಟ್ಟ ಮೊದಲ ಮಾನವ ನೀವೇ ಆಗಿರಬಹುದು. ಇಷ್ಟು ವಿಶೇಷವಾದ ವಿಷಯದ ಭಾಗವಾಗಿರುವುದು ಹೇಗನಿಸುತ್ತದೆ?**

ಅಲಿಸಾ : ನನಗೆ ಬಾಹ್ಯಾಕಾಶದ ಬಗ್ಗೆ ಯಾವಾಗಲೂ ಆಸಕ್ತಿ ಇದೆ ಮತ್ತು ನಾನು ಇಷ್ಟಪಡುವ ಒಂದು ವಿಷಯದ ಬಗ್ಗೆ ಕೆಲಸ ಮಾಡಲು ಸಾಧ್ಯವಾಗುವುದು ಅದ್ಭುತವಾಗಿದೆ. ಮಂಗಳ ಗ್ರಹದ ಮೇಲೆ ವೈಜ್ಞಾನಿಕ ಸಂಶೋಧನೆ ಮಾಡುವಷ್ಟು ದೊಡ್ಡ ಪರಿಣಾಮ ಬೀರಲು ನಾನು ಇಷ್ಟಪಡುತ್ತೇನೆ. ಅದು ನಿಜವಾಗುವ ಅವಕಾಶವಿದೆ ಎಂದು ತಿಳಿದುಕೊಳ್ಳುವುದು ನನ್ನನ್ನು ರೋಮಾಂಚನಗೊಳಿಸುತ್ತದೆ ಮತ್ತು ಅದರ ಕಡೆಗೆ ಕೆಲಸ ಮಾಡುವುದನ್ನು ಮುಂದುವರಿಸಲು ಪ್ರೇರೇಪಿಸುತ್ತದೆ.

**ಪ್ರಶ್ನೆ: ಬಾಹ್ಯಾಕಾಶದ ಬಗ್ಗೆ ನಿಮ್ಮ ಗೀಳು ಯಾವಾಗ ಪ್ರಾರಂಭವಾಯಿತು? ಒಂದು ನಿರ್ದಿಷ್ಟ ಕಾರ್ಟೂನ್ ಪ್ರದರ್ಶನವು ನಿಮಗೆ ಮೊದಲು ಸ್ಫೂರ್ತಿ ನೀಡಿತು ಎಂಬುದು ನಿಜವೇ?**

ಅಲಿಸಾ: ನಾನು ಮೂರು ವರ್ಷದವನಿದ್ದಾಗ ಮೊದಲು ಬಾಹ್ಯಾಕಾಶದ ಬಗ್ಗೆ ಆಸಕ್ತಿ ಹೊಂದಿದ್ದೇನೆ. ನನ್ನ ಆಸಕ್ತಿಯನ್ನು ಹುಟ್ಟುಹಾಕಿದ್ದು 'ದಿ ಬ್ಯಾಕ್‌ಯಾರ್ಡಿಗನ್ಸ್' ಎಂಬ ಕಾರ್ಟೂನ್ ಎಂದು ನಾನು ಊಹಿಸುತ್ತೇನೆ. ಈ ಕಾರ್ಯಕ್ರಮದ ಪ್ರತಿ ಸಂಚಿಕೆಯಲ್ಲಿ ಕಾಲ್ಪನಿಕ ಸಾಹಸಗಳನ್ನು ಮಾಡುವ ಸ್ನೇಹಿತರಿದ್ದಾರೆ ಮತ್ತು ಒಂದು ಸಂಚಿಕೆಯು ಮಂಗಳ ಗ್ರಹಕ್ಕೆ ಮಿಷನ್ ಆಗಿತ್ತು. ಆ ನಿರ್ದಿಷ್ಟ ಸಂಚಿಕೆಯ ಪೋಸ್ಟರ್ ಅನ್ನು ವರ್ಷಗಳ ಕಾಲ ನನ್ನ ಮಲಗುವ ಕೋಣೆಯಲ್ಲಿ ನೇತು ಹಾಕಿದ್ದೆ. ನಾನು ಬಂದು ಬಾಹ್ಯಾಕಾಶ ಮತ್ತು ಮಂಗಳದ ಬಗ್ಗೆ ಹಲವಾರು ಪ್ರಶ್ನೆಗಳನ್ನು ಕೇಳುತ್ತಿದ್ದೆ ಎಂದು ನನ್ನ ತಂದೆ ನೆನಪಿಸಿಕೊಳ್ಳುತ್ತಾರೆ. ಆ ಕ್ಷಣದಿಂದ ಬಾಹ್ಯಾಕಾಶದ ಬಗ್ಗೆ ನನ್ನ ಉತ್ಸಾಹ ಎಂದಿಗೂ ಕಡಿಮೆಯಾಗಲಿಲ್ಲ.



**ಪ್ರಶ್ನೆ: ಮಂಗಳ ಗ್ರಹದಲ್ಲಿ ಮಾನವ ವಸಾಹತು ಸ್ಥಾಪಿಸುವ ಧ್ಯೇಯವನ್ನು ಹೊಂದಿರುವ ಮಾರ್ಸ್‌ಒನ್ ಅನ್ನು ಪ್ರತಿನಿಧಿಸುವ 17 ರಾಯಭಾರಿಗಳಲ್ಲಿ ನೀವು ಒಬ್ಬರು. ಕೆಂಪು ಗ್ರಹದಲ್ಲಿ ಮಾನವ ವಸಾಹತುವನ್ನು ನೀವು ಹೇಗೆ ಕಲ್ಪಿಸಿಕೊಳ್ಳುತ್ತೀರಿ? ಮಂಗಳ ಗ್ರಹದ ಕಾರ್ಯಾಚರಣೆಯಿಂದ ಭೂಮಿಗೆ ಪ್ರಯೋಜನವಾಗಬಹುದಾದ ಯಾವುದೇ ಸಂಶೋಧನೆ ಇದೆಯೇ?**

ಅಲಿಸ್ಸಾ: ಮಂಗಳ ಗ್ರಹದಲ್ಲಿ ವಸಾಹತು ನಿರ್ಮಿಸುವುದರಿಂದ ಮಾನವರು ಇತರ ಗ್ರಹಗಳಿಗೆ ಹೋಗುವ ನಮ್ಮ ಸಾಮರ್ಥ್ಯಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಭವಿಷ್ಯದಲ್ಲಿ ಮತ್ತು ಮುಂದಿನ ಬಾಹ್ಯಾಕಾಶ ಪರಿಶೋಧನೆಯಲ್ಲಿ ಮಂಗಳವು ಮೊದಲ ಹೆಜ್ಜೆಯಾಗಿದೆ. ಅಲ್ಲಿನ ಜೀವನವು ತುಂಬಾ ವಿಭಿನ್ನವಾಗಿರುತ್ತದೆ. ಮುಂಭಾಗದ ಬಾಗಿಲಿನಿಂದ ಹೊರಗೆ ನಡೆಯಲು ಸಹ ನೀವು ಸಂಪೂರ್ಣ ಬಾಹ್ಯಾಕಾಶ ಸೂಟ್ ಅನ್ನು ಧರಿಸಬೇಕಾಗುತ್ತದೆ. ಆದಾಗ್ಯೂ, ಸಂಪನ್ಮೂಲಗಳು ಅಥವಾ ಸಂಶೋಧನೆಗಳು ನಮ್ಮ ಗ್ರಹ ಭೂಮಿಗೆ ಪ್ರಯೋಜನಕಾರಿಯಾಗಬಹುದು. ಅದು ವಸ್ತುಗಳನ್ನು ಭೂಮಿಗೆ ಮರಳಿ ತರುವುದಾಗಲಿ ಅಥವಾ ಭವಿಷ್ಯದ ಪೀಳಿಗೆಗೆ ಎರಡನೇ ಮನೆಯನ್ನು ಸೃಷ್ಟಿಸುವುದಾಗಲಿ.

**ಪ್ರಶ್ನೆ: ಅನುಭವಿ ಗಗನಯಾತ್ರಿ ಸಾಂಡ್ರಾ ಮ್ಯಾಗ್ನಸ್ ಅವರನ್ನು ಭೇಟಿಯಾದಾಗ ಹೇಗನಿಸಿತು? ಅವರು ನಿಮಗೆ ಸ್ಮರಣೀಯ ಸಲಹೆಯನ್ನು ನೀಡಿದ್ದಾರೆಯೇ?**

ಅಲಿಸಾ: ಸಾಂಡ್ರಾ ಮ್ಯಾಗ್ನಸ್ ನನಗೆ ದೊಡ್ಡ ಸ್ಫೂರ್ತಿಯಾಗಿದ್ದರು ಮತ್ತು ನಾನು ಎಷ್ಟೇ ಚಿಕ್ಕವನಾಗಿದ್ದರೂ ಪರವಾಗಿಲ್ಲ ಎಂದು ನನಗೆ




ಕಲಿಸಿದರು. ನಾನು ಇನ್ನೂ ನನ್ನ ಕನಸನ್ನು ಹೊಂದಬಹುದು, ಕಷ್ಟಪಟ್ಟು ಕೆಲಸ ಮಾಡಬಹುದು ಮತ್ತು ಒಂದು ದಿನ ಅದು ನನಸಾಗಬಹುದು ಎಂದು ನಾನು ಅರಿತುಕೊಂಡೆ. ನಾನು ಅವರನ್ನು ಭೇಟಿಯಾದ ಕ್ಷಣದಿಂದ, ನನ್ನ ಕನಸನ್ನು ಮುಂದುವರಿಸಲು ನನಗೆ ಸ್ಫೂರ್ತಿ ಸಿಕ್ಕಿತು.

# ರಾಮನಗರ ಸುದ್ದಿ ಕಾರ್ನರ್

## ಜಿಬಿಡಿಎ ಅಧ್ಯಕ್ಷ ಜಿ.ಎನ್.ನಟರಾಜು ತಂಡ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಮನೆ ಮನೆ ಭೇಟಿ

ರಾಮನಗರ: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳ ನೈಜ ಪರಿಸ್ಥಿತಿಯನ್ನರಿತು ಅಗತ್ಯ ಸಹಕಾರ ನೀಡುವ ನಿಟ್ಟಿನಲ್ಲಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ.ಎನ್.ನಟರಾಜುರವರು ಶಿಕ್ಷಕರೊಂದಿಗೆ ಖುದ್ದು ಮನೆ ಮನೆ ಭೇಟಿಕೊಟ್ಟು ವಿದ್ಯಾರ್ಥಿಗಳಿಂದ ಅಭಿಪ್ರಾಯ ಸಂಗ್ರಹಿಸಿದರು.



ಬಿಡದಿ ಹೋಬಳಿ ಬನ್ನಿಕುಪ್ಪೆ(ಬಿ) ಕ್ಲಸ್ಟರ್ ವ್ಯಾಪ್ತಿಯ ಗಾಣಕಲ್ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ನಾನ ಗ್ರಾಮಗಳಲ್ಲಿನ ವಿದ್ಯಾರ್ಥಿಗಳ ಮನೆಗಳಿಗೆ ಸಂಜೆ ವೇಳೆಯಲ್ಲಿ ಜನಪ್ರತಿನಿಧಿಗಳು ಹಾಗೂ ಶಾಲಾ ಶಿಕ್ಷಕರೊಟ್ಟಿಗೆ ತೆರಳಿದ ಜಿಬಿಡಿಎ ಅಧ್ಯಕ್ಷ ಜಿ.ಎನ್.ನಟರಾಜುರವರು, ವಿದ್ಯಾರ್ಥಿಗಳನ್ನು ಭೇಟಿ ಮಾಡಿ ಪ್ರಸ್ತುತ ಅಧ್ಯಯನದ ಸ್ಥಿತಿಗತಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ಪೂರ್ವ ಸಿದ್ಧತೆ ಹಾಗೂ ಎದುರಾಗಿರುವ ಸಮಸ್ಯೆಗಳ ಕುರಿತು ವಿದ್ಯಾರ್ಥಿಗಳ ಪ್ರತಿಕ್ರಿಯೆಯನ್ನು ಖುದ್ದು ಆಲಿಸಿದರು.

ಈ ಕರಿತು ಜಿಬಿಡಿಎ ಅಧ್ಯಕ್ಷ ಜಿ.ಎನ್.ನಟರಾಜುರವರು ಸುದ್ದಿಗಾರರೊಂದಿಗೆ ಮಾತನಾಡಿ, ಗಾಣಕಲ್ ಸರ್ಕಾರಿ ಪ್ರೌಢಶಾಲೆಯಲ್ಲಿ ಅಧ್ಯಯನ ಮಾಡುತ್ತಿರುವ ಹಲವು ಗ್ರಾಮಗಳ ವಿದ್ಯಾರ್ಥಿಗಳ ಮನೆಮನೆ ಭೇಟಿ ನೀಡುವ ಸಂಕಲ್ಪ ಮಾಡಿದ್ದು ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಯಾವುದೇ ಮಾಹಿತಿ ನೀಡದೆ, ನೈಜ ಸ್ಥಿತಿಯನ್ನು ಅರಿಯುವ ದೃಷ್ಟಿಯಿಂದ ಹಾಗೂ ವಿದ್ಯಾರ್ಥಿಗಳ ಅಧ್ಯಯನದ ಮಾದರಿ ಮತ್ತು ಅವರು ಎದುರಿಸುತ್ತಿರುವ ಸವಾಲುಗಳು, ಪರೀಕ್ಷಾ ಸಂದರ್ಭದಲ್ಲಿ ಬೇಕಾಗಿರುವ ಕಲಿಕಾ ಸಾಮಗ್ರಿಗಳು ಮತ್ತಿತರ ಕಾರಣಗಳನ್ನು ತಿಳಿದುಕೊಳ್ಳಲು ಸಂಜೆ ಹಾಗೂ ರಾತ್ರಿ ಪಾಳೆಯದಲ್ಲಿ ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡಲಾಗುತ್ತಿದೆ.

ಬಾಲ್ಯದಲ್ಲಿ ಕಲಿತದ್ದೆ ಬದುಕಿನಲ್ಲಿ ಉಳಿಯುವುದು ಹಾಗಾಗಿ ವಿದ್ಯಾರ್ಥಿ ಜೀವನದಲ್ಲಿ ಎಸ್‌ಎಸ್‌ಎಲ್‌ಸಿ ಹಂತ ಬದುಕಿನ ಟರ್ನಿಂಗ್ ಪಾಯಿಂಟ್ ಆಗಿದ್ದು, ಈ ನೆಲದ ನಕ್ಷತ್ರಗಳಾದ ವಿದ್ಯಾರ್ಥಿಗಳ ಕಲಿಕೆಯನ್ನು ಪ್ರೋತ್ಸಾಹಿಸುವುದು, ಬೆಂಬಲಿಸುವುದು, ಧೈರ್ಯ ತುಂಬುವುದು ನಮ್ಮೆಲ್ಲರ ಹೊಣೆಗಾರಿಕೆಯಾಗಿದೆ. ಹಾಗಾಗಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಆಲಿಸಿ ಕೈಲಾದ ಸಹಕಾರ ನೀಡುವ ಯೋಜನೆ ಹಮ್ಮಿಕೊಳ್ಳಲಾಗಿದೆ ಎಂದರು.

ಇಂದು ಮುತ್ತರಾಯನಗುಡಿಪಾಳ್ಯ, ಬೆತ್ತನಗೆರೆ, ಮರಳೆಗೌಡನದೊಡ್ಡಿ ಗ್ರಾಮಗಳಿಗೆ ತೆರಳಿ ಎಸ್‌ಎಸ್‌ಎಲ್‌ಸಿ ಓದುತ್ತಿರುವ ವಿದ್ಯಾರ್ಥಿಗಳ ಮನೆ ಭೇಟಿ ನೀಡಲಾಗಿದೆ. ವಿದ್ಯಾರ್ಥಿಗಳು ಓದುತ್ತಿರುವ ಬಗೆ, ಅವರ ಗುರಿಗಳು, ಫಲಿತಾಂಶ ಹೆಚ್ಚಳಕ್ಕೆ ಶಿಕ್ಷಕರ ಸಹಕಾರದಿಂದ ಹಾಕಿಕೊಂಡಿರುವ ಯೋಜನೆಗಳು, ಇನ್ನೂ ಇತರೆ ವಿಚಾರಗಳ ಕುರಿತು ತಿಳಿದುಕೊಳ್ಳಲಾಯಿತು. ಮುಂದಿನ ದಿನಗಳಲ್ಲಿ ನಾನಾ ಗ್ರಾಮಗಳ ವಿದ್ಯಾರ್ಥಿಗಳ ಮನೆ ಭೇಟಿ ಮಾಡಲಾಗುವುದು.

ಭೇಟಿಯ ಸಮಯದಲ್ಲಿ ವಿದ್ಯಾರ್ಥಿಗಳು ಶ್ರದ್ಧೆಯಿಂದ ಅಧ್ಯಯನ ಕಾರ್ಯದಲ್ಲಿ ತೊಡಗಿದ್ದು, ನಮ್ಮ ಗ್ರಾಮಗಳಿಗೆ ಕೀರ್ತಿ ತಂದುಕೊಡುವುದರಲ್ಲಿ ಯಾವುದೇ ಸಂಶಯವಿಲ್ಲ. ಹಾಗೆಯೇ ಜಿಲ್ಲೆಯ ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ಭಾಗದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಓದುತ್ತಿರುವ ವಿದ್ಯಾರ್ಥಿಗಳ ಮನೆಗೆ ಭೇಟಿ ಮಾಡುವ ಮೂಲಕ ವಿದ್ಯಾರ್ಥಿಗಳಿಗೆ ಬೆಂಬಲಿಸಬೇಕಿದೆ ಹಾಗೂ ಶಿಕ್ಷಣ ಇಲಾಖೆ ಜೊತೆಗೆ ನಿಲ್ಲಬೇಕಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳ ಮನೆ ಭೇಟಿ ಸಂದರ್ಭದಲ್ಲಿ ಮುತ್ತರಾಯನಗುಡಿಪಾಳ್ಯ ಗ್ರಾಪಂ ಸದಸ್ಯ ಕೃಷ್ಣಪ್ಪ, ಬನ್ನಿಕುಪ್ಪೆ(ಬಿ)ಕ್ಲಸ್ಟರ್ ಸಿಆರ್‌ಪಿ ಚಿಕ್ಕವೀರಯ್ಯ.ಟಿ.ಎನ್, ಗಾಣಕಲ್ ಸರಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕ ರಮೇಶ್, ಸಹ ಶಿಕ್ಷಕರಾದ ಹೊನ್ನ ಗಂಗಪ್ಪ, ವಿಜಯ್, ಹನುಮಂತರಾಜು, ನೆರೆಯ ಗ್ರಾಮಸ್ಥರಾದ ಹೇಮಂತ್, ಬೆತ್ತನಗೆರೆ ಶಿಕ್ಷಕ ವೆಂಕಟೇಶಯ್ಯ ಇತರರು ಇದ್ದರು.

**2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳ ನೈಜ ಪರಿಸ್ಥಿತಿಯನ್ನು ತಿಳಿದುಕೊಂಡು ಅವರಿಗೆ ಅಗತ್ಯವಿರುವ ಸಹಕಾರ ನೀಡುವ ನಿಟ್ಟಿನಲ್ಲಿ ಮನೆ ಮನೆ ಭೇಟಿ ಕಾರ್ಯಕ್ರಮ ರೂಪಿಸಲಾಗಿದೆ. ಭೇಟಿ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಯಶಸ್ಸು ಸಾಧಿಸಲು ಸ್ಪಷ್ಟಗುರಿ ಹೊಂದುವುದು ದೈನಂದಿನ ವೇಳಾಪಟ್ಟಿ ಅನುಸರಣೆ, ಆರೋಗ್ಯಕರ ಆಹಾರ ಸೇವನೆ ಮತ್ತು ಸಾಕಷ್ಟು ನಿದ್ರೆಗೆ ಆಧ್ಯತೆ ನೀಡುವಂತೆ ಹಾಗೂ ಸಕ್ರಿಯ ಕಲಿಕೆಯ ತಂತ್ರಗಳ ಬಗ್ಗೆ ಶಿಕ್ಷಕರಿಂದ ಸಲಹೆ ಮತ್ತು ಧೈರ್ಯ ತುಂಬುವ ಕೆಲಸ ಮಾಡಲಾಗುತ್ತಿದೆ.–**

ಜಿ.ಎನ್.ನಟರಾಜು,
ಅಧ್ಯಕ್ಷರು ಜಿಬಿಡಿಎ.

## ಕೆರೆ ಒತ್ತುವರಿ ತೆರವುಗೊಳಿಸದಿದ್ದರೆ ಶಿಸ್ತು ಕ್ರಮ: ಸಮಯ ನಿಗದಿಗೊಳಿಸಿ ಸೂಚನೆ ನೀಡಿದ ಜಿಲ್ಲಾಧಿಕಾರಿ

ಮಂಡ್ಯ : ಅಧಿಕಾರಿಗಳು ಹೆಚ್ಚಿನ ಮುತುವರ್ಜಿ ಮತ್ತು ಜವಾಬ್ದಾರಿಯನ್ನು ತೆಗೆದುಕೊಂಡು ಕೆರೆ ಒತ್ತುವರಿಯನ್ನು ತೆರವುಗೊಳಿಸಬೇಕು, ತೆರವುಗೊಳಿಸಿದ ಕೆರೆಗಳು ಮತ್ತೆ ಒತ್ತುವರಿ ಮಾಡದಂತೆ ಸಂರಕ್ಷಣೆ ಮಾಡಬೇಕು, ಕೆರೆ ಒತ್ತುವರಿ ಮಾಡಿದವರು ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಳಾದ ಡಾ ಕುಮಾರ ಅವರು ಹೇಳಿದರು.



ಮಂಡ್ಯ ಜಿಲ್ಲೆಯಲ್ಲಿ ಕೆರೆಗಳ ಒತ್ತುವರಿ ತೆರವುಗೊಳಿಸುವ ಸಂಬಂಧ ಜಿಲ್ಲಾಧಿಕಾರಿ ಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.ಇದುವರೆಗೆ ಸುಮಾರು 245 ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲಾಗಿದ್ದು, ಇನ್ನು 203 ಕೆರೆಗಳ ತೆರವು ಬಾಕಿ ಉಳಿದಿದೆ. ಬಾಕಿ ಇರುವ ಕೆರೆ ಒತ್ತುವರಿಗಳನ್ನು ತಕ್ಷಣವೇ ತೆರವುಗೊಳಿಸಿ ವರದಿ ನೀಡುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸಿದರು. ಪ್ರತಿ ತಿಂಗಳು ಕೆರೆ ಒತ್ತುವರಿ ಸಂಬಂಧ ಸಭೆ ನಡೆಸಲಾಗುತ್ತಿದ್ದು ಮಾರ್ಚ್ 30 ರೊಳಗೆ ಬಾಕಿ ಇರುವ ಎಲ್ಲಾ ಕೆರೆಗಳ ಒತ್ತುವರಿ ತೆರವುಗೊಳಿಸಬೇಕು. ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಜಿಲ್ಲಾಧಿಕಾರಿಗಳು ತಿಳಿಸಿದರು.ತೆರವುಗೊಳಿಸಿದ ಕೆರೆಗಳ ಸುತ್ತ ಟ್ರಂಚ್‌ಗಳನ್ನು (ಕಂದಕ) ನಿರ್ಮಿಸಿ, ನಾಮಫಲಕಗಳನ್ನು ಅಳವಡಿಸುವ ಮೂಲಕ ಮರು–ಒತ್ತುವರಿಯಾಗದಂತೆ ನೋಡಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಎಚ್.ಎಲ್.ಬಿ.ಸಿ, ಕಾವೇರಿ ನೀರಾವರಿ ನಿಗಮ ನಿಯಮಿತ ಹಾಗೂ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಕೆರೆಯನ್ನು ಸಂರಕ್ಷಿಸಬೇಕು. ನಿಯಮಿತವಾಗಿ ಕೆರೆಗಳ ಪರಿಶೀಲನೆ ನಡೆಸಿ ಒತ್ತುವರಿಯಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಮಂಡ್ಯ ಉಪ ವಿಭಾಗಧಿಕಾರಿ ಶಿವಮೂರ್ತಿ, ಪಾಂಡವಪುರ ಉಪ ವಿಭಾಗಧಿಕಾರಿ ಶ್ರೀನಿವಾಸ್ ಡಿಡಿಎಲ್ ಆರ್ ವಿರುಪಾಕ್ಷ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು

## ಫೆ.12ರಂದು ವಿದ್ಯುತ್ ವ್ಯತ್ಯಯ

ತುಮಕೂರು: ಬೆಸ್ಕಾಂ ವಾಣಿಜ್ಯ, ಕಾರ್ಯ ಮತ್ತು ಪಾಲನಾ ವಿಭಾಗ ವ್ಯಾಪ್ತಿಯಲ್ಲಿ ತ್ರೈಮಾಸಿಕ ಕಾಮಗಾರಿ ಕೈಗೊಂಡಿರುವುದರಿಂದ ಫೆಬ್ರವರಿ 12 ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ 66/11 ಕೆವಿ ಅಂಕಸಂದ್ರ ಉಪಸ್ಥಾವರದಿಂದ ವಿದ್ಯುತ್ ಸರಬರಾಜಾಗುವ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಕಾರ್ಯನಿರ್ವಾಕ ಇಂಜಿನಿಯರ್ ಮನವಿ ಮಾಡಿದ್ದಾರೆ.



ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು – ನೋಡಬಹುದು
ಹೆಚ್ಚಿನ ಮಾಹಿತಿಗಾಗಿ 9901010109

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

## ಕನ್ನಡ ಭವನ ನಿರ್ಮಾಣಕ್ಕೆ ನೀಲ ನಕಾಶೆ ತಯಾರಿ: ಜಿಲ್ಲಾಧಿಕಾರಿ

ಕನ್ನಡದ ಐಕ್ಯತೆಯ ಪ್ರತೀಕವಾಗಿ ನಮ್ಮ ಸಾಹಿತ್ಯ, ಸಂಸ್ಕೃತಿ ಹಾಗೂ ಪರಂಪರೆಯನ್ನು ಬಿಂಬಿಸುವ ಮತ್ತು ನಾಡು–ನುಡಿಯ ಮೇಲಿನ ಅಭಿಮಾನವನ್ನು ಜನಮನದಲ್ಲಿ ಮೂಡಿಸುವ ಉದ್ದೇಶದಿಂದ ಮಂಡ್ಯದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು 2024ರ ಡಿಸೆಂಬರ್ 20, 21 ಹಾಗೂ 22ರಂದು ಅತ್ಯಂತ ಅರ್ಥಪೂರ್ಣವಾಗಿ, ವೈಭವಯುತವಾಗಿ ಹಾಗೂ ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಸಾಹಿತ್ಯಾಸಕ್ತರು ಹಾಗೂ ಸಾರ್ವಜನಿಕರ ಸಹಕಾರದಿಂದ ಈ ಸಮ್ಮೇಳನವು ಅಭೂತಪೂರ್ವ ಯಶಸ್ಸು ಕಂಡಿದ್ದು, ನಾಡಿನ ಸಮಸ್ತರಿಂದ ಪ್ರಶಂಸೆಗೆ ಪಾತ್ರವಾಗಿದೆ. 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸವಿ ನೆನಪನ್ನು ಶಾಶ್ವತವಾಗಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕನ್ನಡ ಭವನವನ್ನು ನಿರ್ಮಿಸಬೇಕು ಎಂಬ ಅಭಿಲಾಷೆಯನ್ನು ಜನಪ್ರತಿನಿಧಿಗಳು, ಸಾಹಿತ್ಯಾಸಕ್ತರು ಹಾಗೂ ಮಂಡ್ಯ ಜಿಲ್ಲೆಯ ಜನತೆ ವ್ಯಕ್ತಪಡಿಸಿದ್ದರು.



ಈ ಹಿನ್ನೆಲೆಯಲ್ಲಿ, ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅರ್ಥಪೂರ್ಣವಾಗಿ ಹಾಗೂ ಯಶಸ್ವಿಯಾಗಿ ಆಯೋಜಿಸಿದ ಸವಿನೆನಪಿಗಾಗಿ, ಸಮ್ಮೇಳನದಲ್ಲಿ ವಿವಿಧ ಮೂಲಗಳಿಂದ ಸಂಗ್ರಹಿಸಿದ ಹಣದ ಉಳಿತಾಯ ರೂ.2.50 ಕೋಟಿ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ರೂ.3.00 ಕೋಟಿ, ಒಟ್ಟು ರೂ.5.50 ಕೋಟಿ ವೆಚ್ಚದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಇದರ ಅಂಗವಾಗಿ, ಕಟ್ಟಡ ಕಾಮಗಾರಿಗೆ ಜನವರಿ 30ರಂದು ಶಂಕುಸ್ಥಾಪನೆ ನೆರವೇರಿಸಲಾಗಿದೆ.

ಇದೇ ಸಂದರ್ಭದಲ್ಲಿ ದಿನಾಂಕ 07.02.2026ರಂದು ಸಭೆ ನಡೆಸಲಾಗಿದ್ದು, ಕನ್ನಡ ಭವನ ಕಟ್ಟಡದ ನೀಲ ನಕಾಶೆ, ರೂಪರೇಷೆ ಹಾಗೂ ಇತರೆ ಸಂಬಂಧಿತ ವಿಚಾರಗಳ ಕುರಿತು ಚರ್ಚಿಸಲಾಯಿತು.ಸಭೆಯಲ್ಲಿ, ಕನ್ನಡ ಭವನ ಕಟ್ಟಡವನ್ನು ಕನ್ನಡ ಭಾಷೆ, ಸಂಸ್ಕೃತಿ ಹಾಗೂ ನಾಡು ನುಡಿಯ ವೈಭವವನ್ನು ಪ್ರತಿಬಿಂಬಿಸುವ ರೀತಿಯಲ್ಲಿ ನಿರ್ಮಾಣ ಮಾಡುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

## ಗೃಹಲಕ್ಷ್ಮಿ ಹಣ ಮೃತಪಟ್ಟವರ ಖಾತೆಗೆ ಜಮೆ ಆಗಿದ್ದರೆ ಪರಿಶೀಲನೆ: ಕೆ.ರಾಜು

ರಾಮನಗರ: ಗೃಹಲಕ್ಷ್ಮಿ ಯೋಜನೆಯಡಿ ಜಿಲ್ಲೆಯಲ್ಲಿ ಮೃತಪಟ್ಟವರ ಹೆಸರಲ್ಲಿ ಅನ್ಯರು ಅನುಕೂಲ ಪಡೆಯುತ್ತಿದ್ದರೆ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ರಾಜು ತಿಳಿಸಿದ್ದಾರೆ.



ನಗರದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೆರವೇರಿಸಿದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯಡಿ ರಾಜ್ಯದಲ್ಲಿ ಸುಮಾರು 2 ಲಕ್ಷದಷ್ಟು ಮೃತಪಟ್ಟವರ ಹೆಸರಲ್ಲಿ ಹಣ ಬಿಡುಗಡೆಯಾಗಿದೆ ಎಂಬ ದೂರುಗಳಿರುವ ಬಗ್ಗೆ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ವಿಡಿಯೋ ಕಾನ್ಫರೆನ್ಸ್ ಮೀಟಿಂಗ್‌ನಲ್ಲಿ ತಿಳಿದುಬಂದಿದೆ.

ಪ್ರತಿ ಜಿಲ್ಲೆಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ಇಂತಹ ಪ್ರಕರಣಗಳಿರುವ ಬಗ್ಗೆ ಹೇಳಲಾಗುತ್ತಿದೆ. ಮೃತರ ಬ್ಯಾಂಕ್ ಖಾತೆಗೆ ಹಣ ಜಮಾ ಆಗಿದ್ದರೆ ಅದನ್ನು ಬೇರೆಯವರು ತೆಗೆದುಕೊಳ್ಳಲು ಸಾಧ್ಯವಿಲ್ಲ. ಇದರಲ್ಲಿ ಏನಾದರೂ ಮೋಸ ನಡೆದಿದ್ದರೆ ಮುಂದಿನ ದಿನಗಳಲ್ಲಿ ಸೂಕ್ತ ತನಿಖೆ ನಡೆಸಿ ಕ್ರಮ ಜರುಗಿಸುವುದಾಗಿ ತಿಳಿಸಿದರು.

ಡಾ.ಯತೀಂದ್ರ ಸೂಪರ್ ಸಿಎಂ ಆಗಿದ್ದಾರೆ: ಸಿಎಂ ಸಿದ್ಧರಾಮಯ್ಯನವರ ಪುತ್ರ ಎಂಎಲ್‌ಸಿ ಡಾ.ಯತೀಂದ್ರರವರು ನಮ್ಮ ತಂದೆ ಸಿದ್ಧರಾಮಯ್ಯನವರೇ 5 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆಂದು ಮೊನ್ನೆದಿನ ಹೇಳಿದ್ದಾರೆ. ಈಗಾಗಲೇ ಅವರು ಎರಡು ಮೂರು ಬಾರಿ ಈ ರೀತಿಯ ಹೇಳಿಕೆ ನೀಡಿದ್ದಾರೆ. ಇದು ಪಕ್ಷದ ಹಿತದೃಷ್ಟಿಯಿಂದ ಒಳ್ಳೆಯ ಲಕ್ಷಣವಲ್ಲ. ಹಾಗಾಗಿ ಅವರನ್ನು ನಾವು ಸೂಪರ್ ಸಿಎಂ ಎಂದು ಭಾವಿಸಬೇಕಾಗುತ್ತದೆ. ಇದು ರಾಜ್ಯದ ವಿಷಯ ಆಗಿರುವುದರಿಂದ ಗಂಭೀರವಾಗಿ ಪರಿಗಣಿಸಿ ತಕ್ಷಣವೇ ಸಿದ್ಧರಾಮಯ್ಯನವರು ಅವರಿಗೆ ಕರೆದು ಬುದ್ಧಿ ಹೇಳಬೇಕು ಎಂದರು.

ಸಿಎಂ ಸಿದ್ಧರಾಮಯ್ಯನವರನ್ನು ತಾವು ಕಳೆದ 30 ವರ್ಷಗಳಿಂದ ಉತ್ತಮ ವ್ಯಕ್ತಿತ್ವವುಳ್ಳ ರಾಜಕಾರಣಿಯಾಗಿ ಕಂಡಿದ್ದೇವೆ. ಯಾವುದೇ ಸಂದರ್ಭದಲ್ಲಿ ಅವರ ವ್ಯಕ್ತಿತ್ವಕ್ಕೆ ಕಪ್ಪುಚುಕ್ಕೆ ಬೀಳದಂತೆ ನೋಡಿಕೊಳ್ಳಬೇಕಿದೆ. ರಾಜ್ಯದ ಮುಖ್ಯಮಂತ್ರಿಯಾಗಿ ತಮ್ಮ ಮಗನಿಗೆ ಸರಿಯಾಗಿ ಶಿಸ್ತು ಕಲಿಸಿಲ್ಲ, ಬುದ್ಧಿ ಹೇಳುತ್ತಿಲ್ಲವೆಂಬ ಅಸಮಾಧಾನದ ಮಾತುಗಳು ಪಕ್ಷದ ಕಾರ್ಯಕರ್ತರಿಂದ ಕೇಳಿಬರುತ್ತಿವೆ.

ಪಕ್ಷದ ಶಿಸ್ತು ಕಾಪಾಡುವ ವಿಚಾರದಲ್ಲಿ ರಾಜ್ಯ ನಾಯಕರ ಆದಿಯಾಗಿ ಕಾರ್ಯಕರ್ತರವರೆಗೆ ಒಂದೇ ನಿಯಮವಾಗಿದೆ. ಎಲ್ಲರೂ ಪಕ್ಷದ ನೀತಿ ಮತ್ತು ಸಿದಾಂತಕ್ಕೆ ಗೌರವ ಕೊಡಬೇಕಾಗಿದೆ. ಡಾ.ಯತೀಂದ್ರರಿಗೆ ವಿಶೇಷ ಅಧಿಕಾರವಾಗಲಿ ಅಥವಾ ಆಲೋಚನೆಗಳಾಗಲಿ ಇಲ್ಲವೆಂದು ನಾವು ಭಾವಿಸಿದ್ದೇವೆ. ಮುಖ್ಯಮಂತ್ರಿ ಪುತ್ರನೆಂಬ ಕಾರಣಕ್ಕೆ ಬೇಕಾಬಿಟ್ಟಿ ಹೇಳಿಕೆ ಕೊಡುವುದು ಸೂಕ್ತವಲ್ಲ. ಆದ್ದರಿಂದ ಡಾ.ಯತೀಂದ್ರರನ್ನು ಕರೆದು ತಿಳುವಳಿಕೆ ನೀಡಬೇಕೆಂದು ಹೇಳಿದರು.

ಡಿಸಿಎಂ ಡಿ.ಕೆ.ಶಿವಕುಮಾರ್‌ರವರು ಕಳೆದ 40 ವರ್ಷಗಳಿಂದ ಪಕ್ಷದಲ್ಲಿ ಶಿಸ್ತಿನ ಸಿಪಾಯಿಯಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಉತ್ತಮ ಸಂಘಟಕರಾಗಿ ಪಕ್ಷದ ಅಧ್ಯಕ್ಷರಾಗಿ 2023ರ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ಸಿದ್ಧರಾಮಯ್ಯನವರ ಜತೆಗೂಡಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಕಾರಣೀಭೂತರಾಗಿದ್ದಾರೆ. ಹಾಗಾಗಿ ಅವರಿಗೂ ಒಂದು ಅವಕಾಶ ಕೊಡಬೇಕೆನ್ನುವುದು ಕಾರ್ಯಕರ್ತರ ಮತ್ತು ಮುಖಂಡರ ಅಪೇಕ್ಷೆಯಾಗಿದೆ.

ಮುಖ್ಯಮಂತ್ರಿ ಅವಕಾಶ ಕೊಡುವುದು ಬಿಡುವುದು ಪಕ್ಷದ ಹೈಕಮಾಂಡ್‌ಗೆ ಬಿಟ್ಟಿದ್ದು. ಆದರೆ ಡಾ.ಯತೀಂದ್ರ ಅವರ ಮಾತಿನಿಂದ ಪಕ್ಷದಲ್ಲಿ ಗೊಂದಲ ಮತ್ತು ಅಶಾಂತಿ ಸೃಷ್ಟಿಗೆ ಕಾರಣವಾಗುತ್ತದೆ. ಹಾಗಾಗಿ ತಕ್ಷಣ ಅವರ ಬಾಯಿಗೆ ಬೀಗ ಹಾಕುವ ಕೆಲಸವಾಗಬೇಕು. ಈ ಬಗ್ಗೆ ಮುಂದಿನ ದಿನಗಳಲ್ಲಿ ಪುನರುಚ್ಚಾರ ಆಗದಂತೆ ಹೈಕಮಾಂಡ್ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಕೆ.ರಾಜು ಒತ್ತಾಯಿಸಿದರು.

ಶಾಸಕರ ಗಟ್ಟಿತನದಿಂದ ರಾಮೋತ್ಸವ ಯಶಸ್ಸು:
ಇತ್ತೀಚೆಗೆ ಜರುಗಿದ ರಾಮೋತ್ಸವ ಕಾರ್ಯಕ್ರಮ ರಾಮನಗರದ ಇತಿಹಾಸದ ಪುಟದಲ್ಲಿ ಸೇರಿಕೊಂಡಿದೆ. ಶಾಸಕ ಇಕ್ಬಾಲ್ ಹುಸೇನ್‌ರವರು ಮುಸ್ಲಿಂ ಜನಾಂಗದ ವ್ಯಕ್ತಿಯಾಗಿ ರಾಮೋತ್ಸವವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದ್ದಾರೆ. ಇಂತಹ ಕಾರ್ಯಕ್ರಮ ಯಶಸ್ಸು ಮಾಡಬೇಕಾದರೆ ಗಟ್ಟಿತನ ಮತ್ತು ವಿಶೇಷವಾದ ಧೈರ್ಯವಿರಬೇಕು ಎಲ್ಲಕಿಂತ ಹೆಚ್ಚಾಗಿ ಮನಸ್ಸು ವಿಶಾಲವಾಗಿರಬೇಕು.

ಮಕ್ಕಳು ದೇಶದ ಮುಂದಿನ ಭವಿಷ್ಯವೆಂದು ಭಾವಿಸಿ ಕ್ರೀಡೆ ಮತ್ತು ಕಲೆಗಳಿಂದ ಗುರುತಿಸಿ ಸುಮಾರು 4 ಸಾವಿರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ. 1500 ಜನ ಸಾಧಕರಿಗೆ ಅಭಿನಂದಿಸುವ ಕೆಲಸ ಮಾಡಿದ್ದಾರೆ. ಅವರಿಗೆ ಭಗವಂತ ಇನ್ನೂ ಹೆಚ್ಚಿನ ಆರೋಗ್ಯ ಮತ್ತು ಸೇವೆ ಮಾಡುವ ಶಕ್ತಿ ನೀಡಲಿ ಎಂದು ಕೆ.ರಾಜು ಆಶಿಸಿದರು.

## ಸಾರ್ವಜನಿಕ ಮಸೀದಿ ದರ್ಶನ ಕಾರ್ಯಕ್ರಮ ಯಶಸ್ವಿ

ತುಮಕೂರು: ನಗರದ ಸಂತೆಪೇಟೆಯಲ್ಲಿರುವ ಮಸ್ಜಿದ್–ಎ–ಅರ್ಘುಂನಲ್ಲಿ ಸಾರ್ವಜನಿಕರಿಗಾಗಿ ಭಾನುವಾರ ಆಯೋಜಿಸಲಾಗಿದ್ದ ಮಸೀದಿ ದರ್ಶನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಈ ಕಾರ್ಯಕ್ರಮವನ್ನು ಜಮಾತ್–ಇ–ಇಸ್ಲಾಮಿ ಹಿಂದ್ ವತಿಯಿಂದ ಹಾಗೂ ಅರ್ಘುಂ ಮಸೀದಿ ಸಮಿತಿಯ ಸಹಕಾರದೊಂದಿಗೆ ಆಯೋಜಿಸಲಾಗಿತ್ತು.



ಸಮಾಜದಲ್ಲಿ ಸೌಹಾರ್ದತೆ, ಧಾರ್ಮಿಕ ಸಹಬಾಳ್ವೆ ಹಾಗೂ ಪರಸ್ಪರ ಅರಿವು ಹೆಚ್ಚಿಸುವ ಉದ್ದೇಶದಿಂದ ನಡೆದ ಈ ಕಾರ್ಯಕ್ರಮಕ್ಕೆ ವಿವಿಧ ಸಮುದಾಯಗಳ ನಾಗರಿಕರು, ಯುವಕರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು.

ಕಾರ್ಯಕ್ರಮದ ವೇಳೆ ಇಸ್ಲಾಂ ಧರ್ಮದ ಮೂಲ ತತ್ವಗಳು, ಮಸೀದಿಯ ಮಹತ್ವ, ನಮಾಜ್ ವಿಧಾನ, ಮಸೀದಿಯ ಇತಿಹಾಸ ಹಾಗೂ ಧಾರ್ಮಿಕ ಆಚರಣೆಗಳ ಕುರಿತು ವಿವರವಾದ ಮಾಹಿತಿ ನೀಡಲಾಯಿತು. ಭಾಗವಹಿಸಿದವರು ಮಸೀದಿಯ ಒಳಾಂಗಣ ವಿನ್ಯಾಸ ಹಾಗೂ ಧಾರ್ಮಿಕ ಕ್ರಮಗಳನ್ನು ಆಸಕ್ತಿಯಿಂದ ವೀಕ್ಷಿಸಿದರು.

ಈ ಸಂದರ್ಭದಲ್ಲಿ ಜಮಾತ್–ಇ–ಇಸ್ಲಾಮಿ ಹಿಂದ್ ಮುಖಂಡರಾದ ಡಾ. ಮಸೂದ್ ಅಹಮದ್ ಶರೀಫ್ ಮಾತನಾಡಿ, "ಮಸೀದಿ ದರ್ಶನದಂತಹ ಕಾರ್ಯಕ್ರಮಗಳು ಸಮಾಜದಲ್ಲಿ ಶಾಂತಿ, ಸಹೋದರತ್ವ ಮತ್ತು ಪರಸ್ಪರ ಗೌರವವನ್ನು ಬೆಳೆಸಲು ಸಹಕಾರಿಯಾಗುತ್ತವೆ" ಎಂದು ಹೇಳಿದರು.

ಕಾರ್ಯಕ್ರಮಕ್ಕೆ ಹಾಜರಾದ ಸಾರ್ವಜನಿಕರು, ಇಂತಹ ಉಪಕ್ರಮಗಳು ಸಮಾಜದಲ್ಲಿ ಒಗ್ಗಟ್ಟು ಮತ್ತು ಸೌಹಾರ್ದತೆಯನ್ನು ಬಲಪಡಿಸುತ್ತವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮಸೀದಿ ದರ್ಶನ ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ ದೊರೆತಿದ್ದು, ಮುಂದಿನ ದಿನಗಳಲ್ಲಿ ಇಂತಹ ಇನ್ನಷ್ಟು ಕಾರ್ಯಕ್ರಮಗಳನ್ನು ಆಯೋಜಿಸುವ ಆಶಯವನ್ನು ಸಂಘಟಕರು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಅರ್ಘುಂ ಮಸೀದಿ ಸಮಿತಿಯ ಅಧ್ಯಕ್ಷ ಅಬ್ದುಲ್ ವಾಜಿದ್ ಸಾಬ್, ಕಾರ್ಯದರ್ಶಿ ಕೆ. ನಯಾಜ್ ಅಹಮದ್ (ಜನತಾಬಾಬು), ನಜೀರ್ ಅಹಮದ್, ಅಬ್ದುಲ್ ಜಬ್ಬಾರ್, ಜಮಾತ್–ಇ–ಇಸ್ಲಾಮಿ ಹಿಂದ್ ಅಧ್ಯಕ್ಷ ಮೌಲಾನ ಅಸ್ರಾರ್ ಅಹಮದ್, ಇಮಾಂ ಬೇಗ್, ಶೇಖ್ ಜಿಯಾಉಲ್ಲ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಕೇಂದ್ರ ಸರ್ಕಾರದದೋರಣೆ ವಿರೋಧಿಸಿ ಫೆ.12ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರ

ಕೊರಟಗೆರೆ;–ಕೇಂದ್ರ ಸರ್ಕಾರ ನರೇಗಾಯೋಜನೆ, ವಿಕಸಿತ್ ಭಾರತ್‌ರೋಜಗಾರ್ ಮತ್ತುಅಜೀವಕಾ ಮಿಷನ್‌ಕಾಯ್ದೆ 2025 ಎಂದು ಬದಲಾಯಿಸಿ ಹೊಸ ಕಾಯ್ದೆಗಳನ್ನ ಜಾರಿಗೆತಂದಿರುವುದರ ವಿರುದ್ಧ ಫೆ.12 ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನ ಹಮ್ಮಿಕೊಳ್ಳಲಾಗಿದೆ ಎಂದುಕರ್ನಾಟಕರಾಜ್ಯರೈತ ಸಂಘದತಾಲೂಕ ಾಅಧ್ಯಕ್ಷರಂಗಹನುಮಯ್ಯ ತಿಳಿಸಿದರು.



ವಿದ್ಯುತ್ ಖಾಸಗಿಕರಣ ಕೈ ಬಿಡಬೇಕು ಸೇರಿದಂತೆ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಮುಷ್ಕರ ಹಮ್ಮಿಕೊಂಡಿದ್ದು ಸಾರ್ವಜನಿಕರ ಈ ಪ್ರತಿಭಟನೆ ಭಾಗವಹಿಸಿ ಎಂದು ಮನವಿ ಮಾಡಿದರು.

ಕೊರಟಗೆರೆ ಪಟ್ಟಣದ ಪ್ರವಾಸಿ ಮಂದಿರದಲ್ಲಿರೈತ ಸಂಘ, ಅಂಗನವಾಡಿಕಾರ್ಯಕರ್ತೆಯರು ಮತ್ತು ಸಹಾಯಕಿಯರುಅಖಿಲ ಭಾರತ ಸಾರ್ವತ್ರಿಕ ಮುಷ್ಕರದಕುರಿತಾಗಿ ಸಭೆ ನಡೆಸಿ ನಂತರಸುದ್ದಿಗೋಷ್ಠಿಯನ್ನ ಉದ್ದೇಶಿಸಿ ಮಾತನಾಡಿದರು.

ಮಾತನಾಡಿಕೇಂದ್ರದಲ್ಲಿ ಮೂರು ಬಾರಿಅಧಿಕಾರ ಹಿಡಿದಿರುವ ನರೇಂದ್ರ ಮೋದಿ ಸರ್ಕಾರ 2025ರಲ್ಲಿ ನವಂಬರ್‌ನಲ್ಲಿ 4 ಕಾರ್ಮಿಕ ವಿರೋಧಿ ಕಾಯ್ದೆಗಳನ್ನ ಜಾರಿಗೆತಂದಿದ್ದು, ಇದರಜೊತೆಗೆ ನರೇಗಾಯೋಜನೆ ಮತ್ತೆ ಚಾಲನೆ ನೀಡುವುದು, ಭೂ ಸ್ವಾಧೀನಕಾಯ್ದೆಯನ್ನ ಹಿಂಪಡೆಯಬೇಕು, ಎಪಿಎಂಸಿ ಕಾಯ್ದೆ, ಜಾನುವಾರು ಸಂರಕ್ಷಣಾತಿದ್ದಪಡಿ,

ಸಿಐಟಿಯು ಅಧ್ಯಕ್ಷೆ ವನಜಾಕ್ಷಿ ಮಾತನಾಡಿಐ.ಸಿ.ಡಿ.ಎಸ್. ಯೋಜನೆಯನ್ನು ಪ್ರಾರಂಭಿಸಿ 50 ವರ್ಷಗಳು ಕಳೆದರೂ ನಮ್ಮಯೋಜನೆಖಾಯಂ ಆಗಲಿಲ್ಲ. ನಮ್ಮ ಕೆಲಸವೂ ಖಾಯಂ ಆಗಲಿಲ್ಲ. ಆಹಾರ ಭದ್ರತಾಕಾಯ್ದೆಯಡಿಯಲ್ಲಿಅಂಗನವಾಡಿ ಮಕ್ಕಳಿಗೆ ಕೊಡುವಆಹಾರಕ್ಕೆ ಭದ್ರತೆ ಸಿಕ್ಕಿದೆ. ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಹೇಳಿ ಕೊಡುವ ಶಿಕ್ಷಣಕ್ಕೆ ಭದ್ರತೆ ಸಿಕ್ಕಿದೆ. ಆದರೆಇಡೀಯಾಗಿಯೋಜನೆಗೆ ಸಿಗಬೇಕಾದ ಸ್ಥಾನಮಾನ ಸಿಗಲಿಲ್ಲ. ಸ್ಥಾನಮಾನಕೊಟ್ಟರೆ ಬಜೆಟ್‌ನ್ನು ಹೆಚ್ಚಿಸಬೇಕುಈಗಿರುವಕೇಂದ್ರ ಸರ್ಕಾರದ ಬಜೆಟ್‌ಕೇವಲ 26 ಸಾವಿರಕೋಟಿ ಮಾತ್ರ.2018 ರಿಂದಅಂಗವಾಡಿ ನೌಕರರಿಗೆಕೇಂದ್ರ ಸರ್ಕಾರ ವೇತನ ಹೆಚ್ಚಳ ಮಾಡಲಿಲ್ಲಿಂದಿಗೂಅಂಗನವಾಡಿಕಾರ್ಯಕರ್ತೆಗೆ 2700 ಮಾತ್ರ ಹಾಗೆ ಸಹಾಯಕಿಗೆ 1350 ಮಾತ್ರ ನೀಡಲಾಗುತ್ತಿದೆ.ಇದರಿಂದಜೀವನ ನೆಡಸಲು ಸಾದ್ಯವಾಗುತ್ತಿಲ್ಲ. ಈ ತಾರತಮ್ಯತೆಗೆದುಖಾಯಂ ಮಾಡಬೇಕುಎಂದು ತಿಳಿಸಿದರು.

ರೈತ ಸಂಘದಪ್ರಧಾನ ಕಾರ್ಯದರ್ಶಿ, ಶಬ್ಬೀರ್ ಬಾಷ್ ಮಾತನಾಡಿ ಫೆ.12 ರಂದುಕೊರಟಗೆರೆ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದತಾಲೂಕುಕಚೇರಿವರೆಗೂ ಪ್ರತಿಭಟನಾಜಾಥಾ ಹೊರಡಲಾಗುವುದು, ಕೊರಟಗೆರೆ ಪಟ್ಟಣದಆಟೋಚಾಲಕರುಅಂಗಡಿ ಮಾಲೀಕರು ಹೋಟಲ್ ಮಾಲೀಕರು, ವಿವಿಧ ಸಂಘ ಸಂಸ್ಥೆಯ ಪದಾಧಿಕಾರಿಗಳು, ಹಾಗೂ ಸಾರ್ವಜನಿಕರು ಈ ಮುಷ್ಕರದಲ್ಲಿ ಭಾಗವಹಿಸಿ ಪ್ರತಿಭಟನೆಯನ್ನ ಯಶಸ್ವಿಗೊಳಿಸಿ ಎಂದು ಮನವಿ ಮಾಡಿದರು.

ಇದೆ ಸಂದರ್ಭದಲ್ಲಿಕರವೇ ಪ್ರಧಾನ ಕಾರ್ಯದರ್ಶಿ ಸೈಫುಲ್ಲಾ, ಪ್ರಧಾನ ಕಾರ್ಯದರ್ಶಿ, ಶಬ್ಬೀರ್ ಬಾಷ್, ಸಂಚಾಲಕರು ಅದಿಲಕ್ಷ್ಮೀ, ಷಯುತಾ ಪರಿವಿನ್, ಅಕ್ಷರದಾಸೋಹಅಧ್ಯಕ್ಷ ನಾಗರತ್ನಮ್ಮ,ಉಮಾದೇವಿ, ವೀಣಾ, ನರಸಮ್ಮ, ದೊಡ್ಡಕ್ಕ, ನಂಜಮ್ಮ, ಸುಮ, ಮಾರುತಿ, ಮುದ್ದಬಸವಯ್ಯ, ರಾಕೇಶ್, ಸಿದ್ದರಾಜು, ದಿನೇಶ್, ಪಾಪಣ್ಣ, ಶ್ರೀನಿವಾಸ್ ಸೇರಿದಂತೆಇತರರುಇದ್ದರು.

